MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 84 | ಶನಿವಾರ : 17–01–2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2–00

VOLUME: 05 | ISSUE: 84 | SATURDAY : 17–01–2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

ಫೆ.5ರಿಂದ ಮೂರು ದಿನಗಳ ಹೊಸ ದಿನಾಂಕ ಪ್ರಕಟಿಸಿದ ಜಿಲ್ಲಾ ಉಸ್ತುವಾರಿ ಸಚಿವರು

## ರಾಯಚೂರು ಜಿಲ್ಲಾ ಉತ್ಸವ ಒಂದು ವಾರ ಮುಂದಕ್ಕೆ

**ರಾಯಚೂರು,ಜ.16–** ರಾಯಚೂರು ಜಿಲ್ಲೆಯ ಐತಿಹಾಸಿಕ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಯ ಅನಾವರಣಕ್ಕಾಗಿ ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜನವರಿ 29ರಿಂದ ಮೂರು ದಿನಗಳ ಕಾಲ ನಿಗದಿಯಾಗಿದ್ದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ನ್ನು ಒಂದು ವಾರಕ್ಕೆ ಮುಂದೂಡಲಾಗಿದೆ.

ಜನವರಿ 16ರಂದು ರಾಯಚೂರು ಪ್ರವಾಸದಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಅವರು, ಮಾವಿನಕೆರೆ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ರಾಯಚೂರು ಜಿಲ್ಲಾ ಉತ್ಸವವನ್ನು ಜನವರಿ 29, 30 ಹಾಗೂ 31ರಂದು ನಡೆಸಬೇಕು ಎಂದು ನಿರ್ಧರಿಸಿ ಸಿದ್ಧತೆ ಮಾಡಲಾಗುತ್ತಿತ್ತು. ಆದರೆ, ಜನವರಿ 22ರಿಂದ ವಿಧಾನ ಮಂಡಲ ಅಧಿವೇಶನ ನಡೆಸಬೇಕು ಎನ್ನುವ ಸಚಿವ ಸಂಪುಟದ ನಿರ್ಣಯಕ್ಕೆ ರಾಜ್ಯಪಾಲರು ಅಂಗೀಕರಿಸಿದ್ದರಿಂದಾಗಿ ಕರ್ನಾಟಕ ವಿಧಾನ ಮಂಡಲ ಕಲಾಪವು ತುರ್ತಾಗಿ ನಿಗದಿಯಾದ ಹಿನ್ನೆಲೆಯಲ್ಲಿ ಎಲ್ಲ ಸಚಿವರು ಮತ್ತು ಶಾಸಕರು ಕಲಾಪದಲ್ಲಿ (2ನೇ ಪುಟಕ್ಕೆ>>>)

## ಸಿಎಂ ಹುದ್ದೆ ಬಹಿರಂಗ ಚರ್ಚೆ ಅನಗತ್ಯ: ಡಿಕೆಶಿ

**ನವದೆಹಲಿ, ಜ. 16–** ಮುಖ್ಯಮಂತ್ರಿ ಸ್ಥಾನದ ವಿಚಾರ ನಾನು, ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಡುವಿನ ವಿಚಾರ. ಇದನ್ನು ಬಹಿರಂಗವಾಗಿ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.ಅಸ್ಸಾಂ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಎಐಸಿಸಿ ಕರೆದಿರುವ ಸಭೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರಿನಿಂದ ಇಂದು ಬೆಳಿಗ್ಗೆ ದೆಹಲಿಗೆ ಆಗಮಿಸಿದ ಅವರು ದೆಹಲಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸ್ಥಾನದ ವಿಚಾರ ನಾನು, ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಡುವಿನ ವಿಚಾರ. ಇದು ಸಾರ್ವಜನಿಕವಾಗಿ ಚರ್ಚೆ ಮಾಡುವ ವಿಷಯವಲ್ಲ ಎಂದರು.

ಮೈಸೂರಿನಲ್ಲಿ ರಾಹುಲ್‌ಗಾಂಧಿಯವರನ್ನು ಭೇಟಿ ಮಾಡಿದ್ದೀರಲ್ಲಾ, ಆಗ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಚರ್ಚೆ ಮಾಡಲಾಯಿತೇ ಎಂದು ಕೇಳಿದ ಪ್ರಶ್ನೆಗೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದೆಲ್ಲಾ ಸಾರ್ವಜನಿಕವಾಗಿ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ಪುನರುಚ್ಚರಿಸಿದರು.ಪಕ್ಷದ ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ಬಂದಿರುವ ನೀವು ರಾಹುಲ್‌ಗಾಂಧಿಯವರನ್ನು ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ, ನಾನು ರಾಹುಲ್‌ಗಾಂಧಿ ಸೇರಿದಂತೆ ಪಕ್ಷದ ನಾಯಕರನ್ನು ಭೇಟಿ ಮಾಡುವ ಉದ್ದೇಶದಿಂದಲೇ ದೆಹಲಿಗೆ ಬಂದಿದ್ದೇನೆ. ನೋಡೋಣ, ಅವರು ಸಮಯ ಕೊಟ್ಟರೆ ಭೇಟಿ ಮಾಡಿ ಮಾತನಾಡುತ್ತೇನೆ ಎಂದು ಹೇಳಿದರು.

ಕೇಂದ್ರ ಸಚಿವರನ್ನು ಭೇಟಿ ಮಾಡುವಿರಾ ಎಂಬ ಪ್ರಶ್ನೆಗೆ, ನೀ ರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೆಲವು ಕಾನೂನಾತ್ಮಕ ವಿಚಾರಗಳನ್ನು ಚರ್ಚೆ



ಮಾಡಬೇಕಿದ್ದು, ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೇನೆ ಎಂದು ಅವರು ತಿಳಿಸಿದರು.

ಅಸ್ಸಾಂ ಚುನಾವಣೆಯ ಸಂಬಂಧ ಪಕ್ಷದ ಕಾರ್ಯತಂತ್ರಗಳನ್ನು ಹೇಗೆ ಬಹಿರಂಗಪಡಿಸಲು ಸಾಧ್ಯ. ಇದು ಪಕ್ಷದ ಮಟ್ಟದಲ್ಲಿ ಮಾತ್ರ ಚರ್ಚೆಯಾಗುವ ವಿಚಾರ. ಸಾರ್ವಜನಿಕವಾಗಿ ಅಲ್ಲ. ಏನಾದರೂ ಮಾಹಿತಿ (2ನೇ ಪುಟಕ್ಕೆ>>>)

## ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ನಗರ ಘಟಕಕ್ಕೆ ಈರೇಶ ನಾಯಕ ಅಧ್ಯಕ್ಷರಾಗಿ ನೇಮಕ



ಯುವಮಾರ್ಗ ಸುದ್ದಿ

**ಮಾನ್ವಿ,ಜ.16–** ಪಟ್ಟಣದ ಟಿಎಪಿಎಂಸಿಎಸ್ ಯಲ್ಲಿ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ಜಿಲ್ಲಾ ಘಟಕದ ಅಧೀನದಲ್ಲಿರುವ ರಾಯಚೂರು ನಗರ ಘಟಕದ ಅಧ್ಯಕ್ಷರಾಗಿ ಈರೇಶ ನಾಯಕ (ರಾಯಚೂರು) ಅವರನ್ನು ನೇಮಕ ಮಾಡಲಾಗಿದೆ. ಈ ಕುರಿತು ಜಿಲ್ಲಾ ಅಧ್ಯಕ್ಷರಾದ ಬಿ. ರಾಮಣ್ಣ ನಾಯಕ ಅವರು ಅಧಿಕೃತ ಆದೇಶ ಹೊರಡಿಸಿದ್ದಾರೆ.

ಆದೇಶದಲ್ಲಿ, ನೂತನ ಅಧ್ಯಕ್ಷರು ಸಂಘದ ಎಲ್ಲಾ ತತ್ವಸಿದ್ಧಾಂತಗಳಿಗೆ ಬದ್ಧರಾಗಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಿ, ಸಮಾಜದ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಶ್ರಮಿಸುವುದರ ಜೊತೆಗೆ ಸಂಘಟನೆಯ ಬಲವರ್ಧನೆಗೆ ಸಕ್ರಿಯವಾಗಿ ಕೈಜೋಡಿಸಬೇಕೆಂದು ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರಾದ ದೇವರಾಜ್ ನಾಯಕ ಕರ್ನಾಟಕ ವಾಲ್ಮೀಕಿ ನಾಯಕ ಮಹಾ ಸಭಾ ಮಾನ್ವಿ, ಆಂಜನೇಯ ನಾಯಕ, ಹನುಮೇಶ ನಾಯಕ, ತಾಯಣ್ಣ ನಾಯಕ, ಹಂಪಯ್ಯ ನಾಯಕ, ಪರುಶುರಾಮ, ಮಹೇಶ ನಾಯಕ, ಜಯ ನಾಯಕ, ಮಂಜುನಾಥ ನಾಯಕ, ಯಲ್ಲಯ್ಯ ನಾಯಕ, ಸಬ್ಜೆಲಿ, ದೇವರಾಜ ನಾಯಕ ಜಾಗೀರ್ ಪನ್ನೂರು ಇನ್ನಿತರರು ಉಪಸ್ಥಿತರಿದ್ದರು.

## ಪೈದೊಡ್ಡಿಯ ನೀರಿನ ಸಮಸ್ಯೆ ಪರಿಹರಿಸಲು ಆಗ್ರಹಿಸಿ ಕರವೇ ಪ್ರತಿಭಟನೆ

ಯುವಮಾರ್ಗ ಸುದ್ದಿ

**ಲಿಂಗಸುಗೂರು,ಜ.16–** ತಾಲೂಕಿನ ಪೈದೊಡ್ಡಿ ಗ್ರಾಮದ ನೀರಿನ ಸಮಸ್ಯೆಯನ್ನು ಪರಿಹರಿಸುವಂತೆ ಆಗ್ರಹಿಸಿ ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯದ ಮುಂದೆ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ನೇತೃತ್ವದಲ್ಲಿ ಗ್ರಾಮಸ್ಥರು ಪ್ರತಿಭಟನೆ ಮಾಡಿದರು.

ಪೈದೊಡ್ಡಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿದೆ. ಚಳಿಗಾಲದಲ್ಲಿಯೇ ಈ ಪರಿಯ ನೀರಿನ ಸಮಸ್ಯೆಯಾದರೆ, ಇನ್ನು ಮುಂಬರುವ ಬೆಸಿಗೆ ದಿನಗಳಲ್ಲಿ ಗ್ರಾಮದ ಜನತೆಯ ಪರಿಸ್ಥಿತಿ ನೆನದರೆ ಮೈ ಜುಮ್ಮ್ ಎನ್ನುತ್ತದೆ. ಅಂತಹ ಬೀಕರ ಪರಿಸ್ಥಿತಿ ಪೈದೊಡ್ಡಿ ಗ್ರಾಮದಲ್ಲಿದೆ. ಈ ಬಗ್ಗೆ 9 ಜನವರಿ 2026ರಂದು ತಾಲೂಕು ಪಂಚಾಯತಿ ಸಾಮಾನ್ಯ ಸಭೆಯಲ್ಲಿ ನಮ್ಮ ಸಂಘಟನೆ ಮೌಖಿಕವಾಗಿ ತಮ್ಮ ಬಳಿ ಪೈದೊಡ್ಡಿ ಗ್ರಾಮದ ನೀರಿನ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಲಾಗಿತ್ತು. ಇನ್ನು 2 ದಿನಗಳಲ್ಲಿ ಗ್ರಾಮದ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುತ್ತೇವೆಂದು ಮೌಖಿಕವಾಗಿ ಭರವಸೆ ನೀಡಿದ್ದೀರಿ. ಆದರೆ ವಾರ ಕಳೆದರು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಕಳೆದ 1 ತಿಂಗಳಿಂದ ಗ್ರಾಮದ ಜನತೆ ಕುಡಿಯುವ



ನೀರಿನ ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಅಲ್ಲದೇ ಗ್ರಾಮ ಪಂಚಾಯತಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಈ ಬಗ್ಗೆ ತಲೆ ಕೆಡಿಸಿಕೊಳ್ಳದೇ ಮೌನಕ್ಕೆ ಶರಣಾಗಿದ್ದಾರೆ. ನೀರಿನ ಸಮಸ್ಯೆ ಬಗ್ಗೆ ಹಲವಾರಿ ಬಾರಿ ಮನವಿ ಮಾಡಿದರು ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ.

ಕಾರಣ ಗ್ರಾಮದ ಜನತೆ, ಗ್ರಾಮ ಪಂಚಾಯತಿ ಸದಸ್ಯರು ಹಾಗೂ ನಮ್ಮ ಸಂಘಟನೆಯ ಪದಾಧಿಕಾರಿಗಳು ನೀರಿನ ಸಮಸ್ಯೆ ಪರಿಹರಿಸುವವರೆಗೂ ನಮ್ಮ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಪಟ್ಟುಹಿಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷ ಜಿಲಾನಿಪಾಷಾ, ರವಿಕುಮಾರ ಬರಗುಡಿ, ಅಜೀಜ್ ಪಾಷಾ, ಮೋಸಿನ್ ಖಾನ್, ಅಲ್ಲಾವುದ್ದೀನ್, ತಿಮ್ಮನಗೌಡ, ಮಲ್ಲಣ್ಣ, ಮರೆಪ್ಪ, ಬಾಬು, ವಿರೇಶ ಹಿರೇಮಠ, ಪ್ರಭುಗೌಡ, ಪರಮಣ್ಣ ಸೇರಿ ಗ್ರಾಮಸ್ಥರು ಇದ್ದರು.

## ಬಸವಜಯಂತಿ ಆಚರಿಸಿದ ಮೊದಲಿಗರು "ಮಂಜಪ್ಪನವರು": ಲೋಕೇಶ ಮಾನ್ವಿ

ಯುವಮಾರ್ಗ ಸುದ್ದಿ

**ಅರಕೇರಾ,ಜ.16–**ರಾಷ್ಟ್ರವಾದಿ ಶರಣ ಹರ್ಡೇಕರ ಮಂಜಪ್ಪನವರು ಸಮ ಸಮಾಜದ ಕನಸ್ಸು ಕಂಡ ಧೀಮಂತ,ಮಾನವತಾವಾದಿ ಕಷ್ಟದಲ್ಲೂ ಹಸಿವಿನಲ್ಲು ಊಟವಿಲ್ಲದೆಯೊ ರಾಷ್ಟ್ರೀಯತೆಯನ್ನೆ ಉಸಿರಾರಾಗಿಸಿಕೊಂಡು ಬದುಕಿದವರು. ಮೊಟ್ಟಮೊದಲ ಸಾರ್ವಜನಿಕವಾಗಿ ಬಸವ ಜಯಂತಿ ಆಚರಿಸಿದ ಸ್ತ್ರೀ ಸಮಾಜದ ಜಾಗೃತಿಗಾಗಿ ಅಕ್ಕಮಾದೇವಿ ಜಯಂತಿಯನ್ನು ಆರಂಭಿಸಿದ ಮಹಾತ್ಮರು ಶ್ರೇಯಸ್ಸು ಹರ್ಡೇಕರ್ ಮಂಜಪ್ಪನವರಿಗೆ ಸಲ್ಲುತ್ತದೆ ಎಂದು ಲೋಕೇಶ ಎನ್ ಮಾನ್ವಿ ಹೇಳಿದರು



ಅವರು ಅರಕೇರಾ ತಾಲ್ಲೂಕಿನ ಜಾಗಿರಜಾಡಲದಿನ್ನಿ ಗ್ರಾಮದಲ್ಲಿ ನೀಲಾಂಭಿಕ ಬಸವ ಯೋಗಾಶ್ರಮ ಬಡಿಗೇರ ಮರ್ಚಗುಡ್ಡದಲ್ಲಿ ಹಮ್ಮಿಕೊಂಡಿದ್ದ 82 ನೇ ಬಸವ ತತ್ವ ಚಿಂತನ ಗೋಷ್ಟಿಯಲ್ಲಿ ಮಾತನಾಡಿ ಹರ್ಡೇಕರ ಮಂಜಪ್ಪನವರು ಬಸವಣ್ಣನವರ ದಾಸಿಪುತ್ರನಾಗಲಿ,ವೇಶಾಪುತ್ರನಾಗಲಿ ಎಂಬ ವಚನದಿಂದ ಪ್ರಭಾವಿತರಾಗಿ ಲಿಂಗಧೀಕ್ಷೆಯನ್ನು ಪಡೆದುಕೊಂಡು ಜೀವನದ್ದಕ್ಕೂ ಬಸವತತ್ವ ಪ್ರಸಾರ ಮಾಡಿದ ಮಹಾನುಭಾವರು ಎಂದು ಹೇಳಿದರು.

ಮೊಟ್ಟಮೊದಲಿಗೆ ಬಸವದಳ ಸ್ಥಾಪನೆ ಮಾಡಿದ ಮಂಜಪ್ಪನವರು,ಮಹಾತ್ಮಗಾಂಧೀಜಿಯವರಿಗೆ ಬಸವಣ್ಣನವರ ಜೀವನ ಸಂದೇಶ ಪರಿಚಯಿಸಿದರು.ಸುಮಾರು 88 ಪುಸ್ತಕಗಳನ್ನು ಬರೆದಿದ್ದ ಅವರು ತಾವೇ ಹಳ್ಳಿಗಳಲ್ಲಿ ವಿತರಿಸುವ ಮೂಲಕ ಬಸವಪ್ರಜ್ಞೆ ಮತ್ತು ರಾಷ್ಟ್ರಭಕ್ತಿ ಬೆಳೆಸುವ ಮಹಾ ಕಾರ್ಯವನ್ನು ಮಾಡಿದ್ದಾರೆಂದರು.ಸಮಾಜಸೇವೆಕ ಮತ್ತು ಸಾಹಿತ್ಯಿ ಚಿಂತಕ ಸ್ವಾತಂತ್ರ್ಯ ಹೋರಾಟಗಾರ,ಪತ್ರಕರ್ತ ಕರ್ನಾಟಕ ಗಾಂಧಿ ಎಂದು ಹೆಸರಿಸಲಾಗುತ್ತದೆ. ಅವರು ತಮ್ಮ ಜೀವನವನ್ನು ಸಮಾಜ ಸುಧಾರಣೆ, ಸ್ವಾತಂತ್ರ ಚಳವಳಿ ಮತ್ತು ಗಾಂಧಿವಾದ ತತ್ವಗಳ ಪ್ರಸಾರಕ್ಕೆ ಸಮರ್ಪಿಸಿದರು.

ಶ್ರೀ ವೀರಭದ್ರಸ್ವಾಮಿಗಳು ನೀಲಾಂಬಿಕ ಬಸವ ಯೋಗ ಆಶ್ರಮ ಅಧ್ಯಕ್ಷರುಮಾತನಾಡಿ ಶತ ಶತಮಾನಗಳಿಂದ ಜ್ಞಾನದ ಬೆಳಕು ಚಲ್ಲಿದ ಕಯಕಯೋಗಿ ಬಸವಣ್ಣ ಕಾಯಕತ ಮಹತ್ವವನ್ನು ವಿಶ್ವಕ್ಕೆ ಸಾರಿದರು ಮತ್ತು 12 ನೇ ಶತಮಾನದ ಪ್ರಮುಖ ವಚನಕಾರರು ಬಸವಣ್ಣ,ಅಲ್ಲಮಪ್ರಭು, ಅಕ್ಕಮಹಾದೇವಿ.

ಸಿದ್ದರಾಮೇಶ್ವರ,ಮಡಿವಾಲಮಚಯ್ಯ,ಅಂಬಿಗರಚೌಡಯ್ಯ, ಚೆನ್ನಬಸವಣ್ಣ,ಗಂಗಾಂಬಿಕೆ ಮುಂತಾದವರು ಇವರ ವಚನಗಳ ಮೂಲಕ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾಗಾಗಿ ಶ್ರಮಿಸಿ ಕಾಯಕವೇ ಕೈಲಾಸ,ಜಾತಿ ಇಲ್ಲದ ಭಕ್ತಿ ಮುಂತಾದ ತತ್ವಗಳನ್ನು ಸಾರಿದರು.

ಮುಂದಿನ ದಿನಗಳಲ್ಲಿದುಶ್ಚಟಗಳಾದ ಮದ್ಯಪಾನ, ಗುಟ್ಕಾ, ಬೀಡಿ, ಸೀಗರೇಟ್ ತಂಬಾಕ ಚೀಟುಗಳು, ದಾಸರಾಗಿರುವ ಜನರು ಜಾಗೃತಿ ಮೂಡಿಸಲು ಪತ್ರಿ ಮನೆ ಮನೆಗೆ ಹೋಗಿ ಸಂಚರಿಸಿ ಸ್ವಾಮಿಗಳು ಜೋಳಿಗೆ ಒಡ್ಡಿ ದುಶ್ಚಟಗಳನ್ನು ಬೀಡಿಸಲು ಜೋಳಿಗೆ ಅಭಿಯಾನ ಪ್ರಾರಂಭಿಸುವುದಾಗಿ ಸ್ವಾಮಿಗಳು ಹೇಳಿದರು.

ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಉಪಾಧ್ಯಕ್ಷರಾದ ಸೂಗೂರೇಶ್ವರ ಎಸ್ ಗುಡಿ, ಲೋಕೇಶ ಮಾನ್ವಿ ಇವರುಗಳಿಗೆ ನೀಲಾಂಭಿಕ ಬಸವ ಯೋಗಾಶ್ರಮದವತಿಯಿಂದ ಸನ್ಮಾನಸಿಗೌರವಿಸಲಾಯಿತು.ಸಂದರ್ಭದಲ್ಲಿ. ಅಮರೇಶ ಗವಿಗಟ್ಟಿ ಬೆಟ್ಟಪ್ಪ ಕಸ್ತೂರಿ ಅತ್ತನೂರು, ಚನ್ನಪ್ಪ ಅರಸುರಗಲಗ,ಮಸ್ತಾನಸಾಬ ಸಿರವಾರ,ಅಮರಪ್ಪಶಾಖಾಪೂರು ಹನುಮಂತಪ್ಪ ಮಾಸ್ಟರ್ ವಾಲೇಕರ್ ಜಾಗಿರಜಾಡಲದಿನ್ನಿ, ನಾಗಯ್ಯಸ್ವಾಮಿ ಚಿಕ್ಕಮಠ, ಅಮರೇಶಬಳೆಗಾರ, ಶಿವಕುಮಾರ ಎಸ್ ಗುಡಿ,ದಾಸೂಹದ ವ್ಯವಸ್ಥೆ ಮೌನೇಶ ಬುಡಿಗಿ ಸೇರಿದಂತೆ ಸುತ್ತಮುತ್ತಲ್ಲಿನ ಶರಣ ಶರನಿಯರು ಭಾಗವಹಿಸಿದ್ದರು.

## ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಮೌನೇಶ ಹಿರೇಮಠ ಆಯ್ಕೆ

ಯುವಮಾರ್ಗ ಸುದ್ದಿ



**ದೇವದುರ್ಗ,ಜ.16–**ತಾಲೂಕು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನಿರಂತರವಾಗಿ ಶ್ರಮಿಸಿದ ಇಟಗಿಯ ಮುಖ್ಯ ಶಿಕ್ಷಕ ಮೌನೇಶ ಹಿರೇಮಠ ರವರಿಗೆ 2025–2026 ನೇ ಸಾಲಿನ ದೇವದುರ್ಗ ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗುವ ಮೂಲಕ ತಾಲೂಕಿಗೆ ಹೆಮ್ಮೆಯ ವಿಷಯವಾಗಿದೆ,

ದೇವದುರ್ಗ ತಾಲೂಕಿನ ಹೂವಿನಹೆಡಗಿ ಗಡ್ಡೆಗೂಳಿ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಇಂದು ನಡೆಯುವ ತಾಲೂಕು ಮಟ್ಟದ ಗುರು ನಮನ, ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಶಿಕ್ಷಣ ಇಲಾಖೆ ಮೂಲಗಳಿಂದ ತಿಳಿದು ಬಂದಿದೆ,

ಮೊದಲು 2016 ರಲ್ಲಿ ಸರ್ಕಾರಿ ಹುದ್ದೆಗೆ ಆಯ್ಕೆಯಾಗಿದ್ದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹೇಮನಾಳ ಶಾಲೆಯಲ್ಲಿ ಸೇವೆಗೆ ಸೇರಿ ಇವರು 07 ವರ್ಷಗಳ ಕಾಲ ಸೇವೆ ಸಲ್ಲಿಸಿದನಂತರ ಹೇಮನಾಳ ಶಾಲೆಯಿಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇಟಗಿಗೆ ವರ್ಗಾವಣೆಯಾಗಿ ಪ್ರಸ್ತುತ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇಟಗಿಯಲ್ಲಿ ಪ್ರಭಾರಿ ಮುಖ್ಯ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಲೆಯ ಶಿಸ್ತು, ಆಡಳಿತಾತ್ಮಕ ಸುಧಾರಣೆ ಹಾಗೂ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದನ್ನು ಗಮನಿಸಿದ ಶಿಕ್ಷಣ ಇಲಾಖೆ, ಶಿಕ್ಷಕರ ಸಂಘ ಇವರನ್ನು ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಿದ್ದಾರೆ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇಟಗಿಯಲ್ಲಿ ಪ್ರಭಾರಿ ಮುಖ್ಯ ಗುರುಗಳಾಗಿ ಕನ್ನಡ ವಿಷಯ ಭೊದನೆ ಮಾಡು ತ್ತಿದ್ದಾರೆ ಅವರು ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಕುರಿತು ಆಸಕ್ತಿ ಮೂಡಿಸಿ ಸರಳ ಹಾಗೂ ಪರಿಣಾಮಕಾರಿ ಬೋಧನಾ ವಿಧಾನದಿಂದ ಗಮನಾರ್ಹ ಸಾಧನೆ ಮಾಡಿದ್ದು,

ಶಿಕ್ಷಕರ ಶಿಸ್ತು ಮತ್ತು ಮಕ್ಕಳ ಸ್ನೇಹಿ ಬೋಧನಾ ಶೈಲಿಯ ಮೂಲಕ ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿದ್ದಾರೆ. ಶಿಕ್ಷಣ ಇಲಾಖೆಯು ಇವರ ಕರ್ತವ್ಯ ನಿಷ್ಠೆ, ಶೈಕ್ಷಣಿಕ ನಾವೀನ್ಯತೆ ಹಾಗೂ ಮಕ್ಕಳ ಜೊತೆ ಸರಳತೆ ಅನ್ಯೋನ್ಯತೆ, ಉತ್ತಮ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಸಮಾಜಮುಖಿ ಕಾರ್ಯಗಳನ್ನು ಗಮನಿಸಿ ಶಿಕ್ಷಣ ಇಲಾಖೆ, ಶಿಕ್ಷಕರ ಸಂಘ ಇವರನ್ನು ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡುವ ಮೂಲಕ ಗೌರವಿಸಿದೆ.

ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿರುವ ಸುದ್ದಿ ತಿಳಿಯುತ್ತಿದ್ದಂತೆ ಆ ಶಾಲೆಗಳ ಆಡಳಿತ ಮಂಡಳಿ SDMC, ಸಹೋದ್ಯೋಗಿ, ಶಿಕ್ಷಕರ ಬಳಗ, ವಿದ್ಯಾರ್ಥಿಗಳು ಹಾಗೂ ತಾಲೂಕಿನ ಶಿಕ್ಷಣ ಅಭಿಮಾನಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಸಂಬಂಧಿಕರು, ರಾಜಕೀಯ ಪಕ್ಷಗಳ ಮುಖಂಡರು ವಿಶೇಷವಾಗಿ ಜ್ಞಾನ ವೃಕ್ಷ ತಂಡ ಸಂತೋಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

## ಮೊದಲನೇಯ ಪುಟದಿಂದ

# ಸಿಎಂ ಹುದ್ದೆ ಬಹಿರಂಗ ಚರ್ಚೆ ಅನಗತ್ಯ: ಡಿಕೆಶಿ

ನೀಡುವುದಿದ್ದರೆ ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಿದ್ದಾರೆ, ಅವರು ನೀಡುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು. ಡಿಕೆಶಿ-ರಾಹುಲ್ ಭೇಟಿ ಸಾಧ್ಯತೆ-ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ವಿಚಾರ ಬೂದಿ ಮುಚ್ಚಿದ ಕೆಂಡದಂತಿರುವಾಗಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿಗೆ ತೆರಳಿದ್ದು, ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಅವರು ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿ ಚರ್ಚಿಸುವ ಸಾಧ್ಯತೆ ಇದೆ.

ಕಳೆದ ಮೂರು ದಿನಗಳ ಹಿಂದೆ ರಾಹುಲ್‌ಗಾಂ ಧಿಯವರು ಮೈಸೂರಿಗೆ ಬಂದಿದ್ದಾಗ ಮೈಸೂರಿನ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾ ಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು

ರಾಹುಲ್‌ಗಾಂಧಿಯವರನ್ನು ಭೇಟಿ ಮಾಡಿ ಚರ್ಚಿಸಿದ್ದರು.ಆಗ ರಾಹುಲ್‌ಗಾಂಧಿಯವರು ಇಬ್ಬರು ದೆಹಲಿಗೆ ಬನ್ನಿ, ಎಲ್ಲಾ ವಿಚಾರ ಮಾತನಾಡೋಣ ಎಂದು ಹೇಳಿದ್ದರು.

ದೆಹಲಿಯಲ್ಲಿ ಇಂದು ಸಂಜೆ ಅಸ್ಸಾಂ ವಿಧಾನಸಭಾ ಚುನಾವಣೆಗೆ ಎಐಸಿಸಿ ಸಭೆ ಕರೆದಿದ್ದು, ಅಸ್ಸಾಂ ಚುನಾವಣಾ ವೀಕ್ಷಕರಾಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ಈ ಸಭೆಯಲ್ಲಿ ಪಾಲ್ಗೊಳ್ಳಲು ಇಂದು ಬೆಳಿಗ್ಗೆ ದೆಹಲಿಗೆ ತೆರಳಿದರು.ಇದೇ ಸಂದರ್ಭದಲ್ಲಿ ರಾಹುಲ್‌ಗಾಂಧಿಯವರನ್ನು ಭೇಟಿ ಮಾಡುವ ಸಾಧ್ಯತೆ ಇದೆ.

## ಫೆ.5ರಿಂದ ಮೂರು ದಿನಗಳ ಹೊಸ ದಿನಾಂಕ ಪ್ರಕಟಿಸಿದ ಜಿಲ್ಲಾ ಉಸ್ತುವಾರಿ ಸಚಿವರು

## ರಾಯಚೂರು ಜಿಲ್ಲಾ ಉತ್ಸವ ಒಂದು ವಾರ ಮುಂದಕ್ಕೆ

ಭಾಗಿಯಾಗುತ್ತಿರುವ ಹಿನ್ನೆಲೆಯಲ್ಲಿ ಉತ್ಸವವನ್ನು ಮುಂದಿನ ತಿಂಗಳು ಫೆಬ್ರವರಿ 5ರಿಂದ ಮೂರು ದಿನಗಳ ಕಾಲ ನಡೆಸಲಾಗುವುದು ಎಂದು ಸಚಿವರು ಹೊಸ ದಿನಾಂಕ ಪ್ರಕಟಿಸಿದರು.

ಉತ್ಸವವನ್ನು ಫೆ.6ರಿಂದ ಮೂರು ದಿನಗಳ ಕಾಲ ನಡೆಸಲು ಯೋಜಿಸಲಾಗಿತ್ತಾದರೂ ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ಫೆ.8ರಿಂದ ವಾಲ್ಮೀಕಿ ಜಾತ್ರೋತ್ಸವ ಆಯೋಜನೆಯಾಗಿದ್ದರಿಂದಾಗಿ ಫೆ.6ರ ಬದಲಾಗಿ ಫೆ.5ರಿಂದ ಮೂರು ದಿನಗಳು ಫೆ.5, 6 ಮತ್ತು 7ರಂದು ಉತ್ಸವ ನಡೆಸಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಎನ್.ಎಸ್.ಬೋಸರಾಜು, ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ, ಬಸನಗೌಡ ದದ್ದಲ್, ಹಂಪಯ್ಯ ನಾಯಕ, ಎ.ವಸಂತಕುಮಾರ ಹಾಗೂ ಇನ್ನಿತರ ಗಣ್ಯ ಮಹನಿಯರು ಮತ್ತು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಈಶ್ವರ ಕುಮಾರ ಕಾಂದೂ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಹಾಗೂ ಇತರರು ಇದ್ದರು.

## ಶೈಕ್ಷಣಿಕ ಸಲುವಾಗಿ ಕಲಿಕೆಯ ಕಲ್ಯಾಣ ಅಭಿಯಾನ : ಅಬುಬಕರ್




ಯುವಮಾರ್ಗ ಸುದ್ದಿ

**ಲಿಂಗಸುಗೂರು,ಜ.16:** ಕಲ್ಯಾಣ ಕರ್ನಾಟಕದಲ್ಲಿ 371 (ಜೆ) ಜಾರಿಯಾಗಿ ದಶಕಗಳು ಕಳೆದರು ಶೈಕ್ಷಣಿಕ ಸೌಲಭ್ಯಗಳಿಲ್ಲದೇ ಈ ಭಾಗದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತುಂಬ ಹಿಂದುಳಿಯುವಂತಾಗಿದೆ ಎಂದು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾದ ರಾಜ್ಯ ಕಾರ್ಯದರ್ಶಿ ಅಬುಬಕರ್ ಸಿದ್ದಿಕಿ ಆರೋಪಿಸಿದರು.

ಲಿಂಗಸುಗೂರು ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ಧಿಗೋಷ್ಠಿಯನ್ನು ನಡೆಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಪ್ರದೇಶದ ಗಂಭೀರ ಶೈಕ್ಷಣಿಕ ಬಿಕ್ಕಟ್ಟನ್ನು ಎದುರಿಸಲು, ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾ ಹಾಗೂ ಕರ್ನಾಟಕ ರಾಜ್ಯ ಘಟಕ ಸೆಂಟರ್ ಫಾರ್ ಎಜುಕೇಷನಲ್ ರಿಸರ್ಚ್ ಅನಾಲಿಸಿಸ್ ಸಹಯೋಗದಲ್ಲಿ "ಕಲಿಕೆಯೇ ಕಲ್ಯಾಣ" ಅಭಿಯಾನವನ್ನು ಆರಂಭಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶದ ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಶಿಕ್ಷಣದಲ್ಲಿ ತೀರ ವಿದ್ಯಾರ್ಥಿಗಳು ತೀರ ಹಿಂದುಳಿದಿದ್ದಾರೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿನ ಫಲಿತಾಂಶ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಎಷ್ಟರಮಟ್ಟಿಗೆ ಇದೆ ಎಂದು ತಿಳಿಸುತ್ತದೆ. ಅಲ್ಲದೇ ಈ ಭಾಗದಲ್ಲಿ 21,000 ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಹಾಗೂ ಮೌಲಾನಾ ಆಜಾದ್ ಶಾಲೆಗಳನ್ನು ಗಮನದಲ್ಲಿಟ್ಟುಕೊಂಡು ಸಮುದಾಯ ಕೇಂದ್ರಿತ ಕಾರ್ಯತಂತ್ರವನ್ನು ರೂಪಿಸಲಾಗಿದೆ. ಸಾರ್ವಜನಿಕರಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವುದು, ಸಮುದಾಯದ ಬೆಂಬಲದಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಅನುತ್ತೀರ್ಣ ಮಟ್ಟವನ್ನು ತಗ್ಗಿಸುವುದು ಉದ್ದೇಶದಿಂದ ಈ ಅಭಿಯಾನವನ್ನು ಆರಂಭಿಸಲಾಗಿದ್ದು, ಸಾರ್ವಜನಿಕರು, ಶೈಕ್ಷಣಿಕ ರಂಗದಲ್ಲಿ ಕಾರ್ಯನಿರ್ವಹಿಸುವವರು, ರಾಜಕಾರಣಿಗಳು ಈ ಅಭಿಯಾನವನ್ನು ಬೆಂಬಲ ನೀಡಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಇಮ್ತಿಯಾಜ್, ತಾಲೂಕು ಅಧ್ಯಕ್ಷ ಅಮೀರ್ ಅಲ್ಲಾಭಕ್ಷ, ಅಬ್ದುಲ್ ನಹೀಂ, ಮೌಲಾನಾ ಅಬು ಸೈಯದ್ ಖಾಸ್ಮೀ ಸೇರಿ ಇತರರು ಇದ್ದರು.

## ಮಾನ್ವಿ ಪಟ್ಟಣದ ಡಿಗ್ರಿ ಕಾಲೇಜು ಮುಂಭಾಗದಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಕಾರ್ ನಡುವೆ ಅಪಘಾತ

ಯುವಮಾರ್ಗ ಸುದ್ದಿ

**ಮಾನ್ವಿ,ಜ.16**-ಪಟ್ಟಣದ ಡಿಗ್ರಿ ಕಾಲೇಜು ಮುಂಭಾಗದಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಕಾರ್ ನಡುವೆ ಬೀಕಾರ ಅಪಘಾತ ನಡೆದಿದ್ದು ಕಾರಟಗಿ ಜಸ್ಕಾಂ ಕಚೇರಿಯಲ್ಲಿ ಗುತ್ತಿಗೆದಾರನಾಗಿ ಕಾರ್ಯನಿರ್ವಸುತ್ತಿದ್ದ ವೀರೇಶ ಪಲ್ಲೆದ್ ಪ್ರಣಾಪಾಯದಿಂದ ಪಾರಗಿರುವ ಘಟನೆ ನಡೆದಿದೆ.

ಸ್ಥಳಕ್ಕೆ ಆಗಮಿಸಿದ ಪೋಲೀಸ್ ಸಿಬ್ಬಂದಿ ಹೆಚ್ಚಿನ ಚಿಕಿತ್ಸೆಗೆ ತಾಲೂಕು ಆಸ್ಪತ್ರೆಗೆ ರವಾನಿಸಿದ್ದಾರೆ, ಚಾಲಕನಿಗೆ ಅಲ್ಪಸ್ವಲ್ಪ ಗಾಯಗಳಾಗಿವೆ ಎಂದು ಮೂಲಗಳು ತಿಳಿಸಿವೆ.







## ಜ.19 ರಿಂದ ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವ

**ಭಾಲ್ಕಿ:ಜ.16:** ತಾಲೂಕಿನ ಮೇಹಕರ ಗ್ರಾಮದಲ್ಲಿ ಜ.19 ರಿಂದ ಫೆ.1ರ ವರೆಗೆ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಪೀಠಾಧಿಪತಿ ರಾಜೇಶ್ವರ ಶಿವಾಚಾರ್ಯರು ತಿಳಿಸಿದ್ದಾರೆ.ರಂಭಾಪುರಿ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮಸಭೆ ಕಾರ್ಯಕ್ರಮಗಳು ನಡೆಯಲಿವೆ.ಜ. 21 ರಂದು ರಂಭಾಪುರಿ ಜಗದ್ಗುರುಗಳ 35ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವವನ್ನು ಆಚರಿಸಲಾಗುತ್ತದೆ. ಜ22 ರಿಂದ ಮಹಾರುದ್ರಾಭಿಷೇಕ ಹಾಗೂ ಜಪಯಜ್ಞ ಕಾರ್ಯಕ್ರಮಗಳು ನಡೆಯಲಿದ್ದು, ಫೆ.1 ರಂದು ಶ್ರೀ ಗುರು ವೀರುಪಾಕ್ಷೇಶ್ವರ ದೇವರ ಅದ್ದೂರಿ ಪಲ್ಲಕ್ಕಿ ಉತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ಸಮಾರೋಪ ನಡೆಯಲಿದೆ.ಈ ಐತಿಹಾಸಿಕ ಜಾತ್ರಾ ಮಹೋತ್ಸವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆಯಿದೆ. ರಂಭಾಪುರಿ ಜಗದ್ಗುರುಗಳು ವೀರಶೈವ ಧರ್ಮದ ಆಧ್ಯಾತ್ಮಿಕ ದಿಕ್ಕುದೀಪರಾಗಿದ್ದಾರೆ. ಅವರ ದಿವ್ಯ ಸಾನಿಧ್ಯದಲ್ಲಿ ನಡೆಯುವ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮಸಭೆಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಧರ್ಮಬೋಧನೆಯನ್ನು ಬಲಪಡಿಸುತ್ತವೆ. ಮೇಹಕರ ಗ್ರಾಮದ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವವು ಭಕ್ತಿ, ಶಿಸ್ತು ಮತ್ತು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮಹತ್ವದ ಜಾತ್ರೆಯಾಗಿದ್ದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುನೀತರಾಗಬೇಕ ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಶಿಕ್ಷಣದೊಂದಿಗೆ ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿ: ಪ್ರಭುಕುಮಾರ ಶ್ರೀ



ಯುವಮಾರ್ಗ ಸುದ್ದಿ

**ತಾಳಿಕೋಟಿ,ಜ.16**- ಇವತ್ತು ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಕೇವಲ ಗುಣಮಟ್ಟದ ಶಿಕ್ಷಣ ಕೊಟ್ಟರೆ ಸಾಲದು ಅವರಿಗೆ ಉತ್ತಮ ಸಂಸ್ಕಾರಗಳನ್ನೂ ಕೊಡುವ ಅಗತ್ಯವಿದೆ. ಬ್ರಿಲಿಯಂಟ್ ಸಂಸ್ಥೆ ಗುಣಮಟ್ಟದ ಶಿಕ್ಷಣದೊಂದಿಗೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಹಾಗೂ ಸಂಸ್ಕೃತಿಯನ್ನೂ ತಿಳಿಸಿಕೊಡುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ಕೋಲಾರ-ಬೇಲೂರ ಪಟ್ಟದೇವರು ಹಿರೇಮಠದ ಪೂಜ್ಯ ಶ್ರೀ ಪ್ರಭುಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ಶುಕ್ರವಾರ ಮೈಲೇಶ್ವರದ ಬ್ರಿಲಿಯಂಟ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡ "ಬ್ರಿಲಿಯಂಟ್ ಕಲಾ ವೈಭವ" ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮಕ್ಕಳು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳಿ ಇದರಿಂದ ಹಲವಾರು ಸಮಸ್ಯೆಗಳು ಉದ್ಭವವಾಗುತ್ತಿವೆ, ಅವರ ಮೇಲೆ ನಿಗಾಹ ವಹಿಸಿ ಅವರ ಭೋಗದ ಜೀವನಕ್ಕೆ ಕಡಿವಾಣ ಹಾಕಿ ಎಂದ ಅವರು ಹೆತ್ತವರ ಪಾದಪೂಜೆ ಕಾರ್ಯಕ್ರಮ ಇಟ್ಟುಕೊಂಡಿರುವುದು ಸಂಸ್ಥೆಗೆ ಪರಂಪರೆ ಕುರಿತು ಇರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ.ಈ ಸಂಸ್ಥೆ ಭವಿಷ್ಯದಲ್ಲಿ ಇಡೀ ರಾಜ್ಯದಲ್ಲಿಯೇ ಒಂದು ಮಾದರಿ ಸಂಸ್ಥೆಯಾಗಿ ಬೆಳೆಯಲಿದೆ ಎಂದರು. ಸಮಾರಂಭ ಉದ್ಘಾಟಿಸಿ ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ ಅವರು ಮಾತನಾಡಿ ಶಿಕ್ಷಣದಿಂದಲೇ ಸಮಾಜದ ಸರ್ವಾಂಗೀಣ ಪ್ರಗತಿ ಸಾಧ್ಯ, ಮನುಷ್ಯನ ಸ್ವಾವಲಂಬಿ ಬದುಕಿಗೆ ಶಿಕ್ಷಣ ಅಗತ್ಯವಾಗಿದೆ, ಬ್ರಿಲಿಯಂಟ್ ಶಿಕ್ಷಣ ಸಂಸ್ಥೆ ಜಿಲ್ಲೆಯ ಮಾದರಿ ಸಂಸ್ಥೆಯಾಗಿದೆ ಇಲ್ಲಿಯ ಮಕ್ಕಳು ತಾಲೂಕಿನ ಕೀರ್ತಿಯನ್ನು ರಾಜ್ಯಮಟ್ಟದವರಿಗೆ ತೆಗೆದುಕೊಂಡು ಹೋಗಿದ್ದಾರೆ ನಾನು ಸಂಸ್ಥೆಯ ಅಧ್ಯಕ್ಷರಿಗೆ,ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದಿಸುತ್ತೇನೆ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸ್ಥಳೀಯ ಸರ್ವಜ್ಞ ವಿದ್ಯಾ ಪೀಠದ ಅಧ್ಯಕ್ಷ ಸಿದ್ಧನಗೌಡ ಮಂಗಳೂರ ಮಾತನಾಡಿ ಈ ಕಾರ್ಯಕ್ರಮ ಶಿಕ್ಷಣ ಸಂಸ್ಥೆಗಳಿಗೆ ಒಂದು ಮಾದರಿಯಾಗಿದೆ.

ಇಲ್ಲಿಯ ಮಕ್ಕಳು ರಾಜ್ಯ ಮಟ್ಟದಲ್ಲಿ ಸಾಕಷ್ಟು ಹೆಸರನ್ನು ಮಾಡಿದ್ದಾರೆ, ಆದರೆ ಇವತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಸುಲಭದ ಕೆಲಸವಲ್ಲ ಸಾಕಷ್ಟು ಸಮಸ್ಯೆಗಳು ಎದುರಿಸಬೇಕಾಗುತ್ತದೆ ಎಲ್ಲರ ಸಹಕಾರ ಇದ್ದಾಗ ಮಾತ್ರ ಶಿಕ್ಷಣ ಸಂಸ್ಥೆಗಳು ಬೆಳೆಯಲು ಸಾಧ್ಯ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರಮಠ, ಸಿ ಆರ್ ಸಿ ರಾಜು ವಿಜಾಪುರ ಹಾಗೂ ನಿರ್ದೇಶಕ ಎಸ್.ಎಚ್. ಪಾಟೀಲ ಮಾತನಾಡಿದರು. ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಬಿ. ನಡುವಿನಮನಿ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ 2024-25 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದ ವಿದ್ಯಾರ್ಥಿಗಳಾದ ಭೀಮನಗೌಡ ಸೂಗೂರು, ರಫೀಕ್ ಮೋರಟಗಿ, ಶ್ರವಣ ಕುಮಾರ ಪೂಜಾರಿ, ಅಶ್ವಿನಿ ಹಿರೇಮಠ ಹಾಗೂ ಸುಮಿತ್ ಸುಣದಳ್ಳಿ ಇವರನ್ನು ಸನ್ಮಾನಿಸಲಾಯಿತು.ಮು.ಗು. ಡಾ.ವಿನಾಯಕ್ ಪಟಗಾರ ವರದಿ ವಾಚಿಸಿದರು.ಶಿಕ್ಷಕ ಸಿದ್ದು ಕರಡಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ಎಸ್ ಎಸ್ ಹಿರೇಮಠ, ಸಿ ಆರ್ ಸಿ ರಾಜು ಮೂರಮಾನ,ಮು.ಗು.ಬಿ.ಜಿ.ಕರಕಳ್ಳಿ,ಎ.ಎಂ. ಕೋಳ್ಯಾಳ,ಆಡಳಿತ ಮಂಡಳಿ ಉಪಾಧ್ಯಕ್ಷ ಆರ್ ಬಿ ನಡುವಿನಮನಿ, ಕಾರ್ಯದರ್ಶಿ ಎಮ್ ಬಿ ಮಡಿವಾಳರ, ನಿರ್ದೇಶಕರಾದ ಎಸ್ ಎಚ್ ಪಾಟೀಲ, ಶಶಿಧರ್ ಎಂ ಬಿರಾದಾರ, ನಿರ್ದೇಶಕಿ ಎಲ್‌ಎಂ ಬಿರಾದಾರ, ಎನ್.ಎಸ್.ಗಡಗಿ, ಮುಖ್ಯೋಪಾಧ್ಯಾಯರು, ಬೋಧಕ ಭೋದಿಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಇದ್ದರು. ವೇದಿಕೆ ಕಾರ್ಯಕ್ರಮದ ನಂತರ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ಶ್ರೀಮತಿ ನಿರ್ಮಲಾ ಸಿದ್ದಪ್ಪ ಹಳ್ಳೂರ ಇವರಿಗೆ ತುಲಾಭಾರ ಕಾರ್ಯಕ್ರಮ

ಯುವಮಾರ್ಗ ಸುದ್ದಿ

**ಬಳಗನೂರು,ಜ.16**-ಅಮರನಾಥ ಹಳ್ಳೂರ ಮುಖ್ಯೋಪಾಧ್ಯಾಯರು ಬಸವೇಶ್ವರ ಸಂಯುಕ್ತ ಪ್ರೌಢಶಾಲೆ, ಬಳಗಾನೂರ ಇವರ ಮಾತೋಶ್ರೀಯವರಾದ ಶ್ರೀಮತಿ ನಿರ್ಮಲಾ ಸಿದ್ದಪ್ಪ ಹಳ್ಳೂರ ಇವರಿಗೆ ಪರಮಪೂಜ್ಯ ಸಿದ್ದನ ಕೊಳ್ಳದ ಸ್ವಾಮಿಗಳಾದ ಡಾ. ಶಿವಕುಮಾರ್ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಭಕ್ತಿಭಾವ, ಶ್ರದ್ಧೆ ಮತ್ತು ಸಂಭ್ರಮದಿಂದ ತುಲಾಭಾರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಪವಿತ್ರ ಕಾರ್ಯಕ್ರಮದ ವೇಳೆ ಮಾತೋಶ್ರೀಯವರನ್ನು ಪೂಜ್ಯ ಸ್ವಾಮಿಗಳು ಆಶೀರ್ವದಿಸಿ,

ಆಯುರಾರೋಗ್ಯ, ಕುಟುಂಬ ಸುಖ-ಶಾಂತಿ, ಸದ್ಬುದ್ಧಿ ಹಾಗೂ ಧರ್ಮಮಾರ್ಗದಲ್ಲಿ ಮುಂದುವರಿಯುವ ಶಕ್ತಿಯನ್ನು ದಯಪಾಲಿಸಿದರು. ಕುಟುಂಬದ ಸದಸ್ಯರು, ಬಂಧುಮಿತ್ರರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಗೌರವವನ್ನು ಹೆಚ್ಚಿಸಿದರು.

ಈ ತುಲಾಭಾರ ಸೇವೆಯು ಕೇವಲ ಒಂದು ವಿಧಿಯಷ್ಟೇ ಅಲ್ಲದೆ, ಮಾನವ ಜೀವನದಲ್ಲಿ ತ್ಯಾಗ, ಭಕ್ತಿ ಹಾಗೂ ಸೇವಾಭಾವದ ಮಹತ್ವವನ್ನು ಸಾರುವ ದಿವ್ಯ ಅನುಭವವಾಗಿ ಮೂಡಿಬಂದಿತು.ಇಂತಹ ಸತ್ಪ್ರವೃತ್ತಿ ಕಾರ್ಯಗಳು ಸಮಾಜಕ್ಕೆ



ಧಾರ್ಮಿಕ ಹಾಗೂ ನೈತಿಕ ಪ್ರೇರಣೆಯನ್ನು ನೀಡಲಿ ಎಂದು ಎಲ್ಲರೂ ಪ್ರಾರ್ಥಿಸಿದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ಮುಂಬೈ ಪಾಲಿಕೆ: ಬಿಜೆಪಿ ಮುನ್ನಡೆ ಮಹಾರಾಷ್ಟ್ರ ಸ್ಥಳೀಯ ಚುನಾವಣೆ: ಮಹಾಯುತಿ ಮುನ್ನಡೆ ಶಿವಸೇನೆ ಕಾಂಗ್ರೆಸ್ ಎನ್‌ಸಿಪಿಗೆ ಹಿನ್ನಡೆ

**ಮುಂಬೈ, ಜ. 16–** ದೇಶದ ಆರ್ಥಿಕ ರಾಜಧಾನಿ ಮುಂಬೈ ಸೇರಿದಂತೆ ಮಹಾರಾಷ್ಟ್ರದ 29 ಮಹಾನಗರ ಪಾಲಿಕೆಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಇಂದು ನಡೆದಿದ್ದು, ಬಿಜೆಪಿ ನೇತೃತ್ವದ ಮಹಾಯುತಿ ಆರಂಭಿಕ ಮುನ್ನಡೆ ಸಾಧಿಸಿದೆ.
ಮಹಾರಾಷ್ಟ್ರದ 29 ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಡ ಮಹಾಯುತಿ ಮೈತ್ರಿಕೂಟ 23 ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಹಿಡಿಯುವತ್ತ ಮುನ್ನಡೆ ಸಾಧಿಸಿದೆ.
ಮುಂಬೈ, ಪುಣೆ, ನಾಗಪುರ್ ಸೇರಿದಂತೆ ಮಹಾರಾಷ್ಟ್ರದ ಪ್ರಮುಖ ನಗರಪಾಲಿಕೆಗಳಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಮುನ್ನಡೆಯಲ್ಲಿದ್ದು, ಶಿವಸೇನೆ, ಕಾಂಗ್ರೆಸ್, ಎನ್‌ಸಿಪಿ ಪಕ್ಷಗಳಿಗೆ ಹಿನ್ನಡೆಯಾಗಿದೆ.

ದೇಶದ ಆರ್ಥಿಕ ರಾಜಧಾನಿ ಹಾಗೂ ಶ್ರೀಮಂತ ಮಹಾನಗರ ಪಾಲಿಕೆಯಾಗಿರುವ ಮುಂಬೈನಲ್ಲಿ ಪಾಲಿಕೆ ಆಡಳಿತಕ್ಕಾಗಿ ಬಿಜೆಪಿ ನೇತೃತ್ವದ ಮಹಾಯುತಿ ಹಾಗೂ ಶಿವಸೇನೆ ನಡುವೆ ಹಣಾಹಣಿಯೇ ನಡೆದಿದ್ದು, ಆರಂಭಿಕವಾಗಿ ಬಿಜೆಪಿ ಮುನ್ನಡೆಯಲ್ಲಿದೆ.ಮುಂಬೈ ಮಹಾನಗರ ಪಾಲಿಕೆ ಶಿವಸೇನೆಯ ಭದ್ರ ಕೋಟೆಯಾಗಿದ್ದು, ಇದೇ ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಮಹಾಯುತಿ ಈ ಭದ್ರಕೋಟೆಯನ್ನು ಬೇಧಿಸಿ ಮುನ್ನಡೆಯನ್ನು ಕಾಯ್ದುಕೊಂಡಿದೆ.
ಈ ಚುನಾವಣೆಯಲ್ಲಿ ಬಿಜೆಪಿಯನ್ನು ಮಣಿಸಲು ಹಲವು ವರ್ಷಗಳಿಂದ ದೂರವಾಗಿದ್ದ ಉದ್ಧವ್ ಠಾಕ್ರೆ ಹಾಗೂ ರಾಜ್‌ಠಾಕ್ರೆ ಒಂದಾಗಿದ್ದರೂ ಬಿಜೆಪಿ ಮುನ್ನಡೆ ಕಾಯ್ದುಕೊಂಡಿದೆ.
ಮಹಾರಾಷ್ಟ್ರದಲ್ಲಿ ಶಿವಸೇನೆಯನ್ನು ವಿಭಜಿಸಿ ಏಕನಾಥ್‌ಶಿಂಧೆ ಜತೆಗೂಡಿ ಹಾಗೆಯೇ ಎನ್‌ಸಿಪಿಯನ್ನು ವಿಭಜಿಸಿ ಅಜಿತ್ ಪವಾರ್ ಜತೆಗೂಡಿ ಮಹಾಯುತಿ ಮೈತ್ರಿಕೂಟ ರಚಿಸಿಕೊಂಡಿರುವ ಬಿಜೆಪಿ ಮುಂಬೈ ಸೇರಿದಂತೆ ಮಹಾರಾಷ್ಟ್ರದ ಪ್ರಮುಖ ಪಟ್ಟಣಗಳ ಪಾಲಿಕೆಗಳ ಚುನಾವಣೆಯಲ್ಲಿ ಮುನ್ನಡೆ ಕಾಯ್ದುಕೊಂಡಿದೆ.
ಆಡಳಿತ ಪಕ್ಷದ ಭಾಗವಾಗಿದ್ದ ಎನ್‌ಸಿಪಿ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎನ್ ಸಿಪಿ ಶರದ್ ಪವಾರ್ ಬಣದ ಜೊತೆಗೆ ಕೈಜೋಡಿಸಿ ಚುನಾವಣೆ ಎದುರಿಸಿತ್ತು. ಎನ್ ಸಿಪಿ ಹಾಗು ಎನ್ ಸಿಪಿ ಶರದ್ ಪವಾರ್ ಬಣ. ಹೆಚ್ಚಿನ ಸ್ಥಾನ ಪಡೆಯುವಲ್ಲಿ ವಿಫಲವಾಗಿವೆ.ಈ ಬಾರಿ ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿ ಶಿವಸೇನೆ ಉದ್ಧವ್ ಠಾಕ್ರ ಬಣ ಮತ್ತು ಸೋದಹ ಸಂಬಂಧಿ ರಾಜ್ ಠಾಕ್ರೆ ಅವರ ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಜೊತೆಯಾಗಿ ಸ್ಪರ್ಧೆ ಮಾಡಿದ್ದವು, ಉದ್ಧವ್ ಠಾಕ್ರೆ ಬಣ–ಹಾಗು ಎಂಎನ್ ಎಸ್ ಪೈಪೋಟಿ ನೀಡಿದೆ.ಕಾಂಗ್ರೆಸ್ ಹಾಗು ವಿಬಿಎ ಹೆಚ್ಚಿನ ಸ್ಥಾನ ಹಾಗು ಇತರರು ಹಲವು ಕ್ಷೇತ್ರಗಳಲ್ಲಿ ಗೆಲವು ಸಾಧಿಸಿ ಅಧಿಕಾರ ಚುಕ್ಕಾಣಿ ಹಿಡಯುವಲ್ಲಿ ನಿರ್ಣಾಯಕ ಪಾತ್ರವಹಿಸಿದ್ದಾರೆ. ಬಿಎಂಸಿಯಲ್ಲಿ ಮುನ್ನಡೆ–ಮುಂಬೈನ 227 ಸ್ಥಳೀತ ಸಂಸ್ಥಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ , ಶಿವಸೇನೆ ಮೈತ್ರಿಕೂಟ ಮುನ್ನಡೆ ಪಡೆದಿದೆ. ಬಹುಮತ ಪಡೆಯಲು 114 ಸಂಖ್ಯೆ ಅಗತ್ಯವಿದ್ದು, 86ಕ್ಕೂ ಅಧಿಕ ಸ್ಥಾನ ಪಡೆದು ವಿಜಯದತ್ತ ಹೆಜ್ಜೆ ಹಾಕಿದ್ದಾರೆ.ಶಿವಸೇನೆ ಉದ್ಧವ್ ಠಾಕ್ರೆ ಬಣ ಎನ್ ಸಿಪಿ ಎನ್ ಸಿಪಿ ಶರದ್ ಪವಾರ್ ಬಣ. ಕಾಂಗ್ರೆಸ್, ಎಂಎನ್‌ಎಸ್, ವಿಬಿಎ ಹಾಗೂ ಇತರರು ಕ್ಷೇತ್ರಗಳಲ್ಲಿ ಕಮಾಲು ಮಾಡಲು ವಿಫಲವಾಗಿದೆ.



ಇತ್ತೀಚೆಗೆ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಬಿಜೆಪಿ, ಶಿವಸೇನೆ ಮತ್ತು ಎನ್ ಸಿಪಿ ಪಕ್ಷಗಳು ಬಾರಿ ಮಹುಮತದಿಂದ ಅಧಿಕಾರ ಹಿಡಿದಿದ್ದವು. ಈ ಭಾರಿ ಮಹಾಯುತಿ ಮೈತ್ರಿಕೂಟದಲ್ಲಿ ಬಿಜೆಪಿ, ಶಿವಸೇನೆ ಹೊರತು ಪಡಿಸಿ ಬೇರೆ ಬೇರೆಯಾಗಿ ಸ್ಪರ್ಧಿಸಿದ್ದವು.

ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿರುವ ಬಿಜೆಪಿ ನೇತೃತ್ವದ ಮಹಾಯುತಿ ಪಾಲಿಕೆ ಚುನಾವಣೆಗಳಲ್ಲೂ ಗೆಲುವಿನತ್ತ ದಾಪುಗಾಲು ಇಟ್ಟಿದೆ.
ಮುಂಬೈ, ಪೂನಾ, ನಾಗಪುರ ಸೇರಿದಂತೆ ಪ್ರಮುಖ ಪಾಲಿಕೆಗಳಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮುನ್ನಡೆ ಕಾಯ್ದುಕೊಂಡಿದ್ದು, ಕಾಂಗ್ರೆಸ್, ಶಿವಸೇನೆ, ಶರತ್ ಪವಾರ್ ನೇತೃತ್ವದ ಎನ್‌ಸಿಪಿ ಹಿನ್ನಡೆ ಅನುಭವಿಸಿವೆ. ಮುಂಬೈನ ಒಟ್ಟು 277 ವಾರ್ಡ್‌ಗಳ ಪೈಕಿ ಬಿಜೆಪಿ 42, ಶಿಂಧೆ ನೇತೃತ್ವದ ಶಿವಸೇನೆ 13, ಉದ್ಧವ್ ನೇತೃತ್ವದ ಶಿವಸೇನೆ 28, ಕಾಂಗ್ರೆಸ್ 6, ಎಂಎನ್‌ಎಸ್ 2 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ. ನವಿ ಮುಂಬೈ ಪಾಲಿಕೆಯ 11 ವಾರ್ಡ್‌ಗಳ ಪೈಕಿ ಬಿಜೆಪಿ 15, ಶಿಂಧೆ ಶಿವಸೇನೆ 12 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ. ಥಾಣೆಯಲ್ಲಿ ಒಟ್ಟು 131 ವಾರ್ಡ್‌ಗಳಿದ್ದು, ಶಿಂಧೆ ಶಿವಸೇನೆ 14, ಬಿಜೆಪಿ 12, ಶರದ್ ಪವಾರ್‌ರವರ ಎನ್‌ಸಿಪಿ 2 ವಾರ್ಡ್‌ಗಳಲ್ಲಿ ಮುನ್ನಡೆಯಲ್ಲಿವೆ. ಮುಂಬೈನ 227 ವಾರ್ಡ್‌ಗಳು ಸೇರಿ ಮಹಾರಾಷ್ಟ್ರದ 893 ಪಾಲಿಕೆ / ಪುರಸಭೆ ವಾರ್ಡ್‌ಗಳ 2869 ಸ್ಥಾನಗಳಿಗೆ ಗುರುವಾರ ಮತದಾನ ನಡೆದಿತ್ತು. ಇಂದು ಮತ ಎಣಿಕೆ ನಡೆದಿದೆ. ಸಂಜೆಯೊಳಗೆ ಎಲ್ಲಾ ಪಾಲಿಕೆ, ಪುರಸಭೆಗಳ ಫಲಿತಾಂಶ ಪ್ರಕಟವಾಗಲಿದೆ.

## ಶೈಕ್ಷಣಿಕ ಸಲುವಾಗಿ ಕಲಿಕೆಯ ಕಲ್ಯಾಣ ಅಭಿಯಾನ : ಅಬುಬಕರ್




ಯುವಮಾರ್ಗ ಸುದ್ದಿ

**ಲಿಂಗಸುಗೂರು,ಜ.16:** ಕಲ್ಯಾಣ ಕರ್ನಾಟಕದಲ್ಲಿ 371 (ಜೆ) ಜಾರಿಯಾಗಿ ದಶಕಗಳು ಕಳೆದರು ಶೈಕ್ಷಣಿಕ ಸೌಲಭ್ಯಗಳಿಲ್ಲದೇ ಈ ಭಾಗದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತುಂಬ ಹಿಂದುಳಿಯುವಂತಾಗಿದೆ ಎಂದು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾದ ರಾಜ್ಯ ಕಾರ್ಯದರ್ಶಿ ಅಬುಬಕರ್ ಸಿದ್ದಿಕಿ ಆರೋಪಿಸಿದರು.

ಲಿಂಗಸುಗೂರು ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಪ್ರದೇಶದ ಗಂಭೀರ ಶೈಕ್ಷಣಿಕ ಬಿಕ್ಕಟ್ಟನ್ನು ಎದುರಿಸಲು, ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾ ಹಾಗೂ ಕರ್ನಾಟಕ ರಾಜ್ಯ ಘಟಕ ಸೆಂಟರ್ ಫಾರ್ ಎಜುಕೇಷನಲ್ ರಿಸರ್ಚ್ ಅನಾಲಿಸಿಸ್ ಸಹಯೋಗದಲ್ಲಿ "ಕಲಿಕೆಯೇ ಕಲ್ಯಾಣ" ಅಭಿಯಾನವನ್ನು ಆರಂಭಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶದ ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಶಿಕ್ಷಣದಲ್ಲಿ ತೀರ ವಿದ್ಯಾರ್ಥಿಗಳು ತೀರ ಹಿಂದುಳಿದಿದ್ದಾರೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿನ ಫಲಿತಾಂಶ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಎಷ್ಟರಮಟ್ಟಿಗೆ ಇದೆ ಎಂದು ತಿಳಿಸುತ್ತದೆ. ಅಲ್ಲದೇ ಈ ಭಾಗದಲ್ಲಿ 21,000 ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಹಾಗೂ ಮೌಲಾನಾ ಆಜಾದ್ ಶಾಲೆಗಳನ್ನು ಗಮನದಲ್ಲಿಟ್ಟುಕೊಂಡು ಸಮುದಾಯ ಕೇಂದ್ರಿತ ಕಾರ್ಯತಂತ್ರವನ್ನು ರೂಪಿಸಲಾಗಿದೆ. ಸಾರ್ವಜನಿಕರಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವುದು, ಸಮುದಾಯದ ಬೆಂಬಲದಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಅನುತ್ತೀರ್ಣ ಮಟ್ಟವನ್ನು ತಗ್ಗಿಸುವುದು ಉದ್ದೇಶದಿಂದ ಈ ಅಭಿಯಾನವನ್ನು ಆರಂಭಿಸಲಾಗಿದ್ದು, ಸಾರ್ವಜನಿಕರು, ಶೈಕ್ಷಣಿಕ ರಂಗದಲ್ಲಿ ಕಾರ್ಯನಿರ್ವಹಿಸುವವರು, ರಾಜಕಾರಣಿಗಳು ಈ ಅಭಿಯಾನವನ್ನು ಬೆಂಬಲ ನೀಡಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.


ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಇಮ್ತಿಯಾಜ್, ತಾಲೂಕು ಅಧ್ಯಕ್ಷ ಅಮೀರ್ ಅಲ್ಲಾಭಕ್ಷ, ಅಬ್ದುಲ್ ನಹೀಂ, ಮೌಲಾನಾ ಅಬು ಸೈಯದ್ ಖಾಸ್ಮೀ ಸೇರಿ ಇತರರು ಇದ್ದರು.

## ಲಕ್ಕುಂಡಿ ಗ್ರಾಮದಲ್ಲಿ ನಿಧಿ ಹುಡುಕಾಟ ಆರಂಭ

**ಗದಗ ,ಜ.16–** ಜಿಲ್ಲೆಯ ವಾಸ್ತುಶಿಲ್ಪ ಪಾರಂಪರಿಕ ತಾಣ ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ಮನೆ ನಿರ್ಮಾಣದ ಸಮಯದಲ್ಲಿ ಚಿನ್ನದ ಆಭರಣಗಳು ಪತ್ತೆಯಾದ ನಂತರ ಕರ್ನಾಟಕ ಸರ್ಕಾರ ಇಂದಿನಿಂದ ನಿಧಿ ಹುಡುಕಾಟಕ್ಕೆ ಮುಂದಾಗಿದೆ.ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಾಲಯದ ಆವರಣದಲ್ಲಿ ಪೂರ್ಣ ಪ್ರಮಾಣದ ಉತ್ಖನನವನ್ನು ಪ್ರಾರಂಭಿಸಲಾಗಿದೆ.ಪ್ರವಾಸೋದ್ಯಮ ಇಲಾಖೆ, ಪುರಾತತ್ವ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಲಕ್ಕುಂಡಿ ಪರಂಪರೆ ಅಭಿವೃದ್ಧಿ ಪ್ರಾಧಿಕಾರ ಮತ್ತು ಜಿಲ್ಲಾಡಳಿತ ಜಂಟಿಯಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಿವೆ.

ದೇವಾಲಯದ ಆವರಣದಲ್ಲಿ ಉತ್ಖನನ ನಡೆಸಲು ಜೆಸಿಬಿಗಳು, ಟ್ರಕ್‌ಗಳು ಮತ್ತು ಟ್ರ್ಯಾಕ್ಟರ್‌ಗಳನ್ನು ಸ್ಥಳಾಂತರಿಸಲಾಯಿತು. ಉತ್ಖನನಕ್ಕಾಗಿ 10 ಮೀಟರ್‌ನಿಂದ 10 ಮೀಟರ್ ಪ್ರದೇಶವನ್ನು ಗುರುತಿಸಲಾಗಿದೆ. ಈಗಾಗಲೇ ಉತ್ಖನನಕ್ಕಾಗಿ ಪ್ರದೇಶವನ್ನು ಗುರುತಿಸಲಾಗಿದೆ.ಉತ್ಖನಕ್ಕಾಗಿ ಸುಮಾರು 15 ಮಹಿಳೆಯರು ಮತ್ತು ಐವರು ಪುರುಷರನ್ನು ನೇಮಿಸಿಕೊಂಡಿದ್ದೇವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಲಕ್ಕುಂಡಿಯನ್ನು ಒಂದು ಕಾಲದಲ್ಲಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಕಲ್ಯೂರಿಗಳು ಮತ್ತು ವಿಜಯನಗರ ರಾಜರು ಆಳುತ್ತಿದ್ದರು ಮತ್ತು ಪ್ರಸಿದ್ಧ ಲೋಕೋಪಕಾರಿ ದಾನಚಿಂತಾಮಣಿ ಅತ್ತಿಮಬ್ಬೆಯೊಂದಿಗೆ ಸಂಬಂಧ ಹೊಂದಿದ್ದರು. ಪ್ರಾಚೀನ ಕಾಲದಲ್ಲಿ ಚಿನ್ನದ ನಾಣ್ಯಗಳನ್ನು ಮುದ್ರಿಸಲಾಗುತ್ತಿದ್ದ ಸ್ಥಳವೂ ಇದಾಗಿತ್ತು ಎಂದು ಪುರಾತತ್ವ ಇಲಾಖೆಯ ಮೂಲಗಳು ತಿಳಿಸಿವೆ.ಈ ಪ್ರದೇಶವು ಚಿನ್ನ, ಬೆಳ್ಳಿ, ವಜ್ರ, ಮುತ್ತು, ಮಾಣಿಕ್ಯ, ಹವಳ ಮತ್ತು ಬೆಕ್ಕಿನ ಕಣ್ಣಿನ ಕಲ್ಲುಗಳು ಸೇರಿದಂತೆ ಸಮಾಧಿ ಮಾಡಲಾದ ಅಮೂಲ್ಯ ವಸ್ತುಗಳಿಂದ ಸಮೃದ್ಧವಾಗಿದೆ ಎಂದು



ಅಧಿಕಾರಿಗಳು ತಿಳಿಸಿದ್ದಾರೆ. ಲಕ್ಕುಂಡಿ ಐತಿಹಾಸಿಕವಾಗಿ ಸಮೃದ್ಧ ಕೇಂದ್ರವಾಗಿದೆ ಮತ್ತು ಅಪಾರ ಭೌತಿಕ ಸಂಪತ್ತು ಇನ್ನೂ ನೆಲದಡಿಯಲ್ಲಿ ಅಡಗಿರಬಹುದು ಎಂದು ಪುರಾವೆಗಳು ಸೂಚಿಸುತ್ತವೆ ಎಂದು ಉತ್ಖನನದಲ್ಲಿ ತೊಡಗಿರುವ ಮೂಲಗಳು ತಿಳಿಸಿವೆ.ನವೆಂಬರ್ 2024 ರಲ್ಲಿ ನಡೆಸಿದ ಪರಿಶೋಧನೆಯ ಸಮಯದಲ್ಲಿ, ಲಕ್ಕುಂಡಿಯಲ್ಲಿ ಸಾವಿರಾರು ಪ್ರಾಚೀನ ಕಲಾಕೃತಿಗಳು ಪತ್ತೆಯಾಗಿವೆ.

ಇತ್ತಿಚೆಗೆ, ಆಭರಣಗಳ ಆವಿಷ್ಕಾರವು ಈ ಸ್ಥಳದ ಬಗ್ಗೆ ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಈಗಲೂ ಸಹ ನೀಲಮಣಿ, ಮುತ್ತು, ರತ್ನ, ವಜ್ರ ಮತ್ತು ಬೆಕ್ಕಿನ ಕಣ್ಣುಗಳಂತಹ ಅಮೂಲ್ಯ ಕಲ್ಲುಗಳು ಪ್ರದೇಶದ ವಿವಿಧ ಭಾಗಗಳಲ್ಲಿ ಕಂಡುಬರುತ್ತಿವೆ ಎಂದು ವರದಿಯಾಗಿದೆ.
ಈ ಹೊಸ ಉತ್ಖನನವು ಹೆಚ್ಚಿನ ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿದೆ ಮತ್ತು ಕರ್ನಾಟಕದ ಮಧ್ಯಕಾಲೀನ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳು, ಸಾರಕಗಳು, ಶಿಲ್ಪಗಳು ಮತ್ತು ಆಭರಣಗಳನ್ನು ಪಡೆಯುವ ನಿರೀಕ್ಷೆಯಿದೆ ಎಂದು ಪುರಾತತ್ವ ತಜ್ಞರು ಹೇಳಿದ್ದಾರೆ,

## ಶರಣರ ಇತಿಹಾಸ, ವಚನಗಳ ಅಧ್ಯಯನ ಮಾಡಬೇಕಾಗಿದೆ




**ನಂಜನಗೂಡು: ಜ.16:–** 12ನೇ ಶತಮಾನ ಬಹಳ ಪ್ರಸಿದ್ಧಿ ಪಡೆದಿರುವ ಶತಮಾನವಾಗಿದೆ. ಹಲವಾರು ಶರಣರು ವಚನ ಸಾಹಿತ್ಯಗಳನ್ನು ಕೊಡುಗೆ ನೀಡಿದ್ದಾರೆ. ಶರಣರ ಇತಿಹಾಸ ಹಾಗೂ ವಚನಗಳನ್ನು ಅಧ್ಯಯನ ಮಾಡಬೇಕಾಗಿದೆ ಎಂದು ಬಸವ ಯೋಗಿ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ಸಮಾಜದ ಸಂಘಟನೆ ವತಿಯಿಂದ ಬುಧವಾರ ತಾಲೂಕು ಕಚೇರಿ ಆವರಣದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ಸಿದ್ದರಾಮೇಶ್ವರರು 1840 ವಚನಗಳನ್ನು ರಚನೆ ಮಾಡಿದ್ದರು. ಆದರೆ ವಚನಗಳು ಸರಿಯಾಗಿ ಸಿಗಲಿಲ್ಲ. ಇತ್ತೀಚೆಗೆ 23,000 ವಚನಗಳು ಸಿಕ್ಕಿದ್ದು ಇದರಲ್ಲಿ ಸಿಂಹ ಪಾಲು ಸಿದ್ದರಾಮೇಶ್ವರ ರವರದ್ದಾಗಿದೆ. ಮೂಲತಹ ಮರಾಠಿಗರಾಗಿದ್ದರು ಕೂಡ ವಚನಗಳನ್ನು ಕನ್ನಡದಲ್ಲಿ ರಚನೆ ಮಾಡಿದ್ದು, ಯಾವುದೇ ಶರಣರು ಒಂದು ಜಾತಿಗೆ ಸೀಮಿತ ಮಾಡಬಾರದು ಎಂದರು.

ಬಳಿಕ ತಾಲೂಕು ದಂಡಾಧಿಕಾರಿ ಶಿವಕುಮಾರ್ ಹಾಸನೂರು ಮಾತನಾಡಿ, 12ನೇ ಶತಮಾನದಲ್ಲಿ ಹಲವಾರು ವಚನಕಾರರು ಹಾಗೂ ಸಂತ ಶ್ರೇಷ್ಠರು ಹುಟ್ಟಿಕೊಂಡಿರುವ ಕಾಲವಾಗಿದೆ. ಪ್ರಸ್ತುತ 21ನೇ ಶತಮಾನದಲ್ಲಿ ವಚನಗಳಿಗೆ ಮಹತ್ವ ಬಂದಿದೆ. ಶರಣರ ಸಿದ್ದಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಜಯಂತಿಗಳಿಗೆ ಮಹತ್ವ ಬರುತ್ತದೆ ಎಂದರು.
ಇದೇ ಸಂದರ್ಭದಲ್ಲಿ ಸಮಾಜದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಭೋವಿ ಸಂಘದ ಅಧ್ಯಕ್ಷ ಬಾಲಾಜಿ, ಗೌರವಾಧ್ಯಕ್ಷ ಮಹಾದೇವ, ಪ್ರಧಾನ ಕಾರ್ಯದರ್ಶಿ ವಸಂತ್ ಕುಮಾರ್, ಲಕ್ಷ್ಮಣ ಭೋವಿ, ಹರೀಶ್ ಕುಮಾರ್, ಕಾಳಪ್ಪ, ಶಿವರಾಜು, ಪಾಪಣ್ಣ ಮಣಿಕಂಠ ಸ್ವಾಮಿ ನರಸಿಂಹ ಉಮೇಶ್ ಲಿಂಗರಾಜು ತಿಮ್ಮರಸು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

## ಬಸವೇಶ್ವರ ವೃತ್ತದ ಅಭಿವೃದ್ಧಿಗೆ ಬದ್ಧ ಸಚಿವ ಡಾ.ಶರಣಪ್ರಕಾಶ ಪಾಟೀಲ್



**ಸೇಡಂ,ಜ,16:** ಬಹು ದಿನಗಳ ಬೇಡಿಕೆ ಹಾಗೂ ನಗರ ಸೌಂದರ್ಯಕ್ಕೆ ಪುಷ್ಠಿ ನೀಡುವಂತಹ ಬಸವೇಶ್ವರ ವೃತ್ತದ ಅಭಿವೃದ್ಧಿಗೆ ಬದ್ಧವಾಗಿದ್ದೇನೆ. ಬೇಕಾದ ಕ್ರಮಗಳನ್ನು ಅನುಸರಿಸಿ ದುರಸ್ತಿಕೈಗೊಂಡು ಬಸವೇಶ್ವರ ವೃತ್ತವನ್ನು ಅಭಿವೃದ್ಧಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ್ ಊಡಗಿ ಹೇಳಿದರು.ಇಲ್ಲಿನ ಬಸವೇಶ್ವರ ವೃತ್ತಕ್ಕೆ ಬೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ವಾಸ್ತುಶಿಲ್ಪಿ ಬಸರಾಜಪ್ಪ ಖಂಡೇರಾವ್ ಅವರೊಂದಿಗೆ ಚರ್ಚಿಸಿ ಮಾತನಾಡಿದ ಅವರು, ಸೇಡಂ ಪಟ್ಟಣದ ಹೃದಯ ಭಾಗದಲ್ಲಿ ಸ್ಥಾಪಿತವಾಗಿರುವ ಅಣ್ಣ ಬಸವಣ್ಣ ಅವರ ಅಶ್ವಾರೂಢ ಮೂರ್ತಿ ಹಾಗೂ ಅದರ ಸುತ್ತಲಿನ ಸ್ಥಳದ ಸೌಂದರ್ಯ ಹೆಚ್ಚಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.ತಜ್ಞ ಖಂಡೇರಾವ್ ಅವರೊಟ್ಟಿಗೆ ಚರ್ಚಿಸಿದಂತೆ ಫ್ಲೋರಿಂಗ್, ಹಿಂಭಾಗ ಗೋಡೆ ಹಾಗೂ ಬಸವೇಶ್ವರ ಮೂರ್ತಿ ಸ್ಥಳದ ಸುತ್ತಲಿನ ಗ್ರ್ಯಾನೇಟ್ ದುರಸ್ತಿ ಕೈಗೊಳ್ಳಬೇಕಾಗಿದೆ ಎಂದರು.ಬಸವೇಶ್ವರ ವೃತ್ತದ ರಸ್ತೆ ನಡುವೆ ಇರುವ ಬಾಣಂತಿ ಕಂಬದ ಸುತ್ತಲೂ ವಾಹನಗಳು ಅಂತರ ಕಾಯ್ದು ಸಂಚರಿಸಲು ಒಂದೂವರೆ ಅಡಿ ವೃತ್ತಾಕಾರದ ಗಾರ್ಡನ್ ಸ್ಥಳವನ್ನು ನಿರ್ಮಿಸುವ ಕುರಿತು ಸೂಚಿಸಿಲಾಗಿದೆ. ಈಗಿರುವ ಪಾರ್ಕಿಂಗ್ ಟೈಲ್ಸ್ ತೆಗೆದು ಸಿಸಿ ರಸ್ತೆ ಕಾಮಗಾರಿ ಕುರಿತು ಯೋಜಿಸಲಾಗಿದೆ ಎಂದು ಹೇಳಿದರು.

ಈ ವೇಳೆಯಲ್ಲಿ ರಾಜ್ಯ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಬಸವರಾಜ ಪಾಟೀಲ್ ಊಡಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶರಣರೆಡ್ಡಿ ಪಾಟೀಲ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ವಿಶ್ವನಾಥ ಪಾಟೀಲ ಬೊಮ್ಮನಹಳ್ಳಿ,ಕೃಷಿ ಸಮಾಜದ ಅಧ್ಯಕ್ಷ ಬಸವರಾಜ ರೇವಗೊಂಡ, ಪುರಸಭೆ ಮಾಜಿ ಅಧ್ಯಕ್ಷ ವೀರೇಂದ್ರ ಪಾಟೀಲ್ ರುದ್ನೂರು, ಸಚಿವರ ಆಪ್ತ ಸಹಾಯಕರಾದ ಆನಂದ್ ಪೂಜಾರಿ, ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ಶಿವರುದ್ರ ಕೊಳಕುರು, ಮಹೇಶ್ ಪಾಟೀಲ್ ತರನಳ್ಳಿ, ಚನ್ನಬಸಪ್ಪ ಹಾಗರಗಿ,ಅಶೋಕ್ ರೆಡ್ಡಿ ಕೆರಳ್ಳಿ, ಸತೀಶ್ ಪೂಜಾರಿ,ಸಂತೋಷ ತಳವಾರ,ಶ್ರೀನಿವಾಸ,ಸೇರಿದಂತೆ ಹಲವರು ಉಪಸ್ಥಿತರಿದ್ದರು.
ನಗರ ಸೌಂದರ್ಯಕ್ಕೆ ಬೇಕಾದ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗಲಾಗುತ್ತದೆ. ಬಸವೇಶ್ವರ ವೃತ್ತ ಸೇರಿದಂತೆ ಅಂಬಿಗ ಚೌಡಯ್ಯ, ಸಂಗೊಳ್ಳಿ ರಾಯಣ್ಣ ಮೂರ್ತಿ ಸ್ಥಳದ ಅಭಿವೃದ್ಧಿಯನ್ನು ಕೈಗೊಳ್ಳಯುವ ಕುರಿತು ವಾಸ್ತುಶಿಲ್ಪಿಯೊಂದಿಗೆ ಚರ್ಚಿಸಿದ್ದೇನೆ.ಬರುವ ದಿನಗಳಲ್ಲಿ ಬೇಕಾದ ಅನುದಾನ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಂಡು ಈ ಮೂರು ಸ್ಥಳಗಳ ಅಭಿವೃದ್ಧಿ ಪಡಿಸುತ್ತೇನೆ.

ಡಾ.ಶರಣಪ್ರಕಾಶ ಪಾಟೀಲ್ ಊಡಗಿ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ

ಯುವ ಮಾರ್ಗ

www.yuvamarga.com Yuva Marga yuva_marga_

# ರಾಯಚೂರು ಜಿಲ್ಲಾ ಉತ್ಸವದಲ್ಲಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ– ಅಶೋಕ ಪವಾರ್

ಯುವಮಾರ್ಗ ಸುದ್ದಿ




**ಸಿರವಾರ, ಜ.16–**ರಾಯಚೂರು ಜಿಲ್ಲಾ ಉತ್ಸವ ಅನೇಕ ವರ್ಷಗಳ ನಂತರ ನಡೆಯುತ್ತಿದ್ದು ಇಡೀ ರಾಜ್ಯಕ್ಕೆ ಮಾದರಿಯಾಗುವಂತೆ ಇದರಲ್ಲಿ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸೋಣವೆಂದು ತಹಶಿಲ್ದಾರರ ಅಶೋಕ ಪವಾರ ಹೇಳಿದರು.

ಅವರು ಪಟ್ಟಣದ ತಹಶಿಲ್ದಾರರ ಕಚೇರಿಯಲ್ಲಿ ಗಣರಾಜ್ಯೋತ್ಸವ ಹಾಗೂ ರಾಯಚೂರು ಜಿಲ್ಲಾ ಉತ್ಸವದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಪ್ರತಿ ವರ್ಷದಂತೆ ಈ ವರ್ಷವೂ ಜ.26 ರಂದು ಗಣರಾಜ್ಯೋತ್ಸವವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸೋಣ ಎಲ್ಲಾ ಇಲಾಖೆಯ ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು, ಗಣರಾಜ್ಯೋತ್ಸವ ಸಮಾರಂಭದಲ್ಲಿ ಸಿರವಾರ ಪ.ಪಂ. ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲೂಕಿನ ಎಲ್ಲಾ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು. ನಂತರ ರಾಯಚೂರು ಜಿಲ್ಲಾ ಉತ್ಸವದಲ್ಲಿ ಮಕ್ಕಳು, ಯುವಕರಿಗೆ, ಮಹಿಳೆಯರಿಗೆ, ಸಾಹಿತಿಗಳಿಗೆ, ಕಲಾವಿದರಿಗೆ ಸೇರಿದಂತೆ ಎಲ್ಲಾ ಕಲೆಗಳ ಪ್ರದರ್ಶನ ವೇದಿಕೆಯ 3 ದಿನಗಳ ಕಾಲ ರಾಯಚೂರು ಜಿಲ್ಲಾ ಉತ್ಸವ ಜ.29 ರಿಂದ 31ರ ವರೆಗೆ ತುಂಬಾ ಅದ್ದೂರಿಯಾಗಿ ಜರುಗಲಿದೆ.

ಇಲ್ಲಿ ಊಟ, ಸಾರಿಗೆ, ಸಂಗೀತ, ಮನೋರಂಜನಾ ನೃತ್ಯ, ನಾಟಕ, ಕಾರ್ಯಕ್ರಮಗಳು, ಸಾಹಸ ಪ್ರದರ್ಶನ, ಸೇರಿದಂತೆ ಹಲವಾರು ಸಾಧನೆಯ ಪ್ರಸ್ತುತ ಪಡಿಸಲಿದ್ದಾ. ಹೆಲಿಕ್ಯಾಪ್ಟರ್ ಮೂಲಕ ರಾಯಚೂರು ವೀಕ್ಷಣೆ ಕಡಿಮೆ ದರದಲ್ಲಿ ಲಭ್ಯವಿದೆ. ಜ.26ರಂದು ಗಣರಾಜ್ಯೋತ್ಸವ ಪ್ರತಿವರ್ಷದಂತೆ ಈ ವರ್ಷ ಅದ್ದೂರಿಯಾಗಿ ನಡೆಸಲಾಗುತ್ತದೆ ಎಂದರು. ಸಭೆಯಲ್ಲಿ ತಾ.ಪಂ.ಇಓ ಶಶಿಧರಸ್ವಾಮಿ ಮಠದ್, ಪ.ಪಂ.ಮುಖ್ಯಾಧಿಕಾರಿ ಸುರೇಶ ಶೆಟ್ಟಿ ನೌಕರರ ಸಂಘದ ಅಧ್ಯಕ್ಷರಾದ ಆರೀಫ್ ಮಿಯ್ಯಾ, ಎಸಿಡಿಪಿಓ ಮಂಜುಳಾ, ಉಪ ಖಜಾನೆಯ ಅಧಿಕಾರಿ ಶಂಕ್ರಮ್ಮ, ಎಇಇ ವಿಜಯಲಕ್ಷ್ಮಿ ಸೇರಿದಂತೆ ಅನೇಕರು ಇದ್ದರು.,

# ನೀಟ್ ಪಿಜಿ 2025 ಕಟ್-ಆಫ್ ಗಣನೀಯವಾಗಿ ಇಳಿಸಿರುವ ಕ್ರಮಕ್ಕೆ ಎಐಡಿಎಸ್‌ಓ ಖಂಡನೆ



**ಕಲಬುರಗಿ,ಜ.16–**ನೀಟ್ ಪಿಜಿ–2025 ರ ಅರ್ಹತಾ ಶೇಕಡಾವಾರು ಮತ್ತು ಕಟ್-ಆಫ್ ಅಂಕಗಳನ್ನು ತೀವ್ರವಾಗಿ ಕಡಿತಗೊಳಿಸಿರುವ ರಾಷ್ಟ್ರೀಯ ಪರೀಕ್ಷಾ ಮಂಡಳಿಯ ನಿರ್ಧಾರವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ಜಿಲ್ಲಾ ಕಾರ್ಯದರ್ಶಿ ವೆಂಕಟೇಶ ದೇವದುರ್ಗ ಖಂಡಿಸಿದ್ದಾರೆ.

ಈ ಕ್ರಮವು ಸ್ನಾತಕೋತ್ತರ ವೈದ್ಯಕೀಯ ಪ್ರವೇಶಗಳನ್ನು ನಿರ್ವಹಿಸುವಲ್ಲಿ ಗಂಭೀರ ಆಡಳಿತದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. &ಡಣಾಂ ಣ;ಅರ್ಹತೆಯನ್ನು ಏಕ-ಅಂಕಿಯ ಶೇಕಡಾವಾರು ಮತ್ತು ಕೆಲವು ವರ್ಗಗಳಲ್ಲಿ ಶೂನ್ಯ ಶೇಕಡಾವಾರುಗೆ ಇಳಿಸಿರುವುದು ಶೈಕ್ಷಣಿಕ ಗುಣಮಟ್ಟವನ್ನು ದುರ್ಬಲಗೊಳಿಸುತ್ತದೆ ಮತ್ತು ಆರೋಗ್ಯ ವ್ಯವಸ್ಥೆಯ ಭವಿಷ್ಯದ ಗುಣಮಟ್ಟದ ಬಗ್ಗೆ ತೀವ್ರ ಕಳವಳವನ್ನು ಹುಟ್ಟುಹಾಕುತ್ತದೆ. ಅಸಮರ್ಪಕ ಪಿಜಿ ಸೀಟುಗಳು, ಕಳಪೆ ಶೈಕ್ಷಣಿಕ ಮೂಲಸೌಕರ್ಯಗಳು, ವಿಳಂಬವಾದ ಕೌನ್ಸೆಲಿಂಗ್ ಮತ್ತು ಕಳಪೆ ಯೋಜನೆಯಂತಹ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವ ಬದಲು, ಸರ್ಕಾರವು ಅರ್ಹತಾ ಮಾನದಂಡಗಳನ್ನೇ ದುರ್ಬಲಗೊಳಿಸಲು ಮುಂದಾಗಿದೆ. ವೈದ್ಯಕೀಯ ಶಿಕ್ಷಣವು ಸಾರ್ವಜನಿಕ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತದೆ. ಮಾನದಂಡಗಳನ್ನು ರಾಜಿ ಮಾಡಿಕೊಳ್ಳುವುದು ಸ್ವೀಕಾರಾರ್ಹವಲ್ಲ. ಇದು ಆತಂಕಕಾರಿ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ಓಃಇ ಯಿಂದ ಪಾರದರ್ಶಕ ವಿವರಣೆ, ಶೈಕ್ಷಣಿಕ ಕಠಿಣತೆಯ ಪುನಃಸ್ಥಾಪನೆ ಮತ್ತು ಸಕಾಲಿಕ ಮತ್ತು ಅರ್ಹತೆ ಆಧಾರಿತ ಪ್ರವೇಶಗಳನ್ನು ಖಚಿತಪಡಿಸಿಕೊಳ್ಳಲು ತುರ್ತು ಸುಧಾರಣೆಗಳನ್ನು ತರಬೇಕೆಂದು ಅವರು ಆಗ್ರಹಿಸಿದ್ದಾರೆ.

# ಸೋಶಿಯಲ್ ಡೆಮಾಕ್ರಟಿಕ್ ಟ್ರೇಡ್ ಯೂನಿಯನ್ (SDTU) ಜಿಲ್ಲಾ ಘಟಕ ರಚನಾ ಕಾರ್ಯಕ್ರಮ

ಯುವಮಾರ್ಗ ಸುದ್ದಿ




**ರಾಯಚೂರು,ಜ.16–**ಗುರುವಾರದಂದು ಅಮ್ಮಕೋಂಡಿದ್ದ ಸೋಶಿಯಲ್ ಡೆಮಾಕ್ರಟಿಕ್ ಟ್ರೇಡ್ ಯೂನಿಯನ್ (SDTU) ರಾಜ್ಯ ಸಂಯೋಜಕ ಅಬ್ದುಲ್ ರಹೀಮ್ ಪಟೇಲ್ ಹಾಗೂ ರಾಜ್ಯ ಸಂಯುಕ್ತ ಸಂಯೋಜಕ ಮೊಹಮ್ಮದ್ ಶಫಿ ಅವರ ಮೇಲ್ವಿಚಾರಣೆಯಲ್ಲಿ ಜಿಲ್ಲಾ ಘಟಕ ರಚನಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಸಂದರ್ಭದಲ್ಲಿ ಹೊಸದಾಗಿ ಆಯ್ಕೆಯಾದ ಜಿಲ್ಲಾ ಘಟಕವನ್ನು ಘೋಷಿಸಲಾಯಿತು. ಸದಸ್ಯರು ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಅವರ ಹಕ್ಕುಗಳನ್ನು ಕಾಪಾಡಲು ಶ್ರಮಿಸುವುದಾಗಿ ಪ್ರಮಾಣವಚನ ಸ್ವೀಕರಿಸಿದರು.

ಹೊಸ ಜಿಲ್ಲಾ ಘಟಕ–ಮೊಹಮ್ಮದ್ ಸಾಹಬ್ ಅಧ್ಯಕ್ಷರು ಸಯ್ಯೆದ್ ಅಶ್ರಫ್ ಹುಸೇನ್ ಉಪಾಧ್ಯಕ್ಷರು ಡಿ. ಶ್ರೀನಿವಾಸ್ ಉಪಾಧ್ಯಕ್ಷರು ಶಮ್ಸ್ ರಝಾ ಪ್ರಧಾನ ಕಾರ್ಯದರ್ಶಿ ಫೈಸಲ್ ಬಿನ್ ಅಸ್ಲಂ ಕಾರ್ಯದರ್ಶಿ ಮೊಹಮ್ಮದ್ ತಸ್ಕೀನ್ ಹುಸೇನ್ ಸಂಯುಕ್ತ ಕಾರ್ಯದರ್ಶಿ ಮೊಹಮ್ಮದ್ ಎಜಾಜ್ ರಾಣಾ ಖಜಾಂಚಿ ಅರಫಾತ್ ಕಾನೂನು ಇನ್‌ಚಾರ್ಜ್ ಮಹೆಬೂಬ್ ಪಾಷಾ ಜಿಲ್ಲಾ ಘಟಕ ಸದಸ್ಯ ಆಲಂ ಜಿಲ್ಲಾ ಘಟಕ ಸದಸ್ಯ ಶಂಶೀರ್ ಬೈಗ್ ಜಿಲ್ಲಾ ಘಟಕ ಸದಸ್ಯ ಮೊಹಮ್ಮದ್ ರಸೂಲ್ ಸಾಬ್ ಜಿಲ್ಲಾ ಘಟಕ ಸದಸ್ಯ ಹುಸೇನ್ ಬಾಷಾಜಿಲ್ಲಾ ಘಟಕ ಸದಸ್ಯ

# ಸ್ವಾಮಿ ವಿವೇಕಾನಂದರ ತತ್ವಾದರ್ಶ ಪಾಲಿಸಿ: ಸೇಡಂ ಕರೆ



**ಕಲಬುರಗಿ,ಜ.16–**ಸ್ವಾಮಿ ವಿವೇಕಾನಂದರು ಭಾರತದಲ್ಲಿ ಜನ್ಮ ತಾಳಿದರೂ ಜಗತ್ತಿನಾದ್ಯಂತ ಪರ್ಯಟನೆ ಮಾಡಿ ಅಲ್ಲಿ ಭರತ ಭೂಮಿಯ ಸಂಸ್ಕೃತಿ, ಸಂಸ್ಕಾರ, ಆಚಾರ, ವಿಚಾರ ಮತ್ತು ಸರ್ವಧರ್ಮಗಳ ಸಾರವು ಒಂದೇ ಎಂದು ಸಾರಿ ಜಗತ್ಪ್ರಸಿದ್ಧ ವೀರ ಸನ್ಯಾಸಿ ಎನಿಸಿ ಕೊಂಡಿದ್ದು, ಅವರ ಆದರ್ಶ ಮತ್ತು ಬೋಧನೆಗಳು ಎಂದೆಂದಿಗೂ ಪ್ರಸ್ತುತ, ಅವುಗಳನ್ನು ಅಳವಡಿಸಿ ಕೊಂಡು ಇಂದಿನ ಯುವಕರು ಭವ್ಯ ಭಾರತದ ನಿರ್ಮಾಣ ಮಾಡಬೇಕು ಎಂದು ಲೋಕಸಭಾ ಮತ್ತು ರಾಜ್ಯ ಸಭಾ ಮಾಜಿ ಸದಸ್ಯರಾದ ಸನ್ಮಾನ್ಯ ಡಾ.ಬಸವರಾಜ ಪಾಟೀಲ ಸೇಡಂ ಜೀಯವರು ಕರೆ ಕೊಟ್ಟರು.

ನಗರದ ಮಹಾಂತ ಜ್ಯೋತಿ ಪ್ರತಿಷ್ಠಾನ ಟ್ರಸ್ಟ್ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದ ಜಯಂತಿ ಮತ್ತು ಹಸಿವು ಮುಕ್ತ ಕಲಬುರಗಿ ಕಾರ್ಯಕ್ರಮದ ಉದ್ಘಾಟನೆಯ ನಂತರ ಮಾತನಾಡಿದ ಅವರು, ಹಸಿವು ಮುಕ್ತ ಕಲಬುರಗಿ ಕಾರ್ಯಕ್ರಮವು ನಿರಂತರವಾಗಿದ್ದು, ಅದರಂತಹ ಪುಣ್ಯದ ಕೆಲಸ ಇನ್ನೊಂದಿಲ್ಲ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅಪ್ಪಾರಾವ ಅಕ್ಕೋಣಿಯವರು ಸಹ ಅನ್ನದಾನವೇ ಅತಿ ಶ್ರೇಷ್ಠದಾನ ಎಂದು ತಿಳಿಸಿದರು. ನಂತರ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಯುವಕ ಯುವತಿಯರಿಗೆ ವಿವೇಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅದರಲ್ಲಿ ಶ್ರೀಯುತರುಗಳಾದ ಸುರೇಶ್ ಕಲಶೆಟ್ಟಿ , ವಿಜಯಕುಮಾರ್ ಬಿರಾದಾರ, ಬಸವರಾಜ ಎಸ್ ಎಂ, ಪಾಂಡುರಂಗ ಕುಲಕರ್ಣಿ, ಜಗದೀಪ, ಶಾಮರಾವ್ ಪಾಟೀಲ್, ಪ್ರಶಾಂತ್ ತಡಕಲೆ, ಶಾಂತಾ ವಾಲಿ, ಮಂಜುಳಾ ಡೊಳ್ಳೆ ಮತ್ತು ಪ್ರೀತಿ ಅಕ್ಕೋಣಿ ಯವರಿಗೂ ಪ್ರಶಸ್ತಿಗಳನ್ನು ವಿತರಿಸಲಾಯಿತು.

ಸಮಾರಂಭದಲ್ಲಿ ಡಾ.ಎ.ಎಸ್ ಭದ್ರಶೆಟ್ಟಿಯವರು, ಡಾ ಸಿದ್ದರಾಮಪ್ಪ ಮಾಲಿ ಪಾಟೀಲ್ ಧಂಗಾಪುರ, ಡಾ.ಸುಭಾಷ್ ಕಮಲಾಪುರೆ, ರಾಜು ಕಾಕಡೆ, ಮಹಾದೇವಿ ಪಾಟೀಲ್ ಆಲಗೂಡ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

ಪ್ರತಿಷ್ಠಾನದ ಅಧ್ಯಕ್ಷ ಪ್ರೋ.ಶಿವರಾಜ್ ಪಾಟೀಲ್ ಕಾರ್ಯಕ್ರಮ ನಿರೂಪಣೆ ಮಾಡಿದರು ಮತ್ತು ಅನುಷ್ಠಾನಾಧಿಕಾರಿ ಪ್ರೀತಿ ಅಕ್ಕೋಣಿಯವರ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು, ನಂತರ ಆಶ್ರಯ ಕಾಲೋನಿಯ ಸುಮಾರು 50 ಕುಟುಂಬ ಸದಸ್ಯರುಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನೆರವೇರಿತು.

# ಹಸಮಲ್ ಸರ್ಕಾರಿ ಶಾಲೆಯಲ್ಲಿ ಸಿದ್ದರಾಮೇಶ್ವರ ಜಯಂತಿ ಆಚರಣೆ

ಯುವಮಾರ್ಗ ಸುದ್ದಿ



**ಮಸ್ಕಿ.ಜ.16–** ತಾಲೂಕಿನ ಹಸಮುಕಲ್ ಗ್ರಾಮದಲ್ಲಿರುವ ಉನ್ನತೀಕರಿಸಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಆಚರಿಸಲಾಯಿತು ಎಂದು ಮುಖ್ಯ ಶಿಕ್ಷಕ ಅಮರೇಶ ಗುಡದೂರು ತಿಳಿಸಿದರು.

ಶಿವಯೋಗಿ ಸಿದ್ದರಾಮೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ಮುತ್ತಣ್ಣ ಭೋವಿ ಮತ್ತು ಗ್ರಾ.ಪಂ ಮಾಜಿ ಸದಸ್ಯ ಬಸವರಾಜ ಭೋವಿ ಮಾತನಾಡಿ ಸಿದ್ದರಾಮೇಶ್ವರರು ಸಕಲ ಜೀವಿಗಳ ಸಂಕುಲದ ಉಳಿವಿಗಾಗಿ ಕರೆ, ಕಟ್ಟೆ, ಬಾವಿಗಳನ್ನು ಕಟ್ಟಿಸಿದ್ದಾರೆ. ಕಾಯಕ ಯೋಗಿ, ಕರ್ಮಯೋಗಿ, ಶಿವಯೋಗಿ ಎಂದು ಕರೆಸಿಕೊಂಡು ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದವರು, ಕಪ್ಪಿಲಸಿದ್ದ ಚನ್ನಮಲ್ಲಿಕಾರ್ಜುನ ಅಂಕಿತ ನಾಮದಿಂದ ಹಲವಾರು ವಚನಗಳನ್ನು ರಚಿಸಿದಾರೆ. ಇವರ ಜೀವನ ಚರಿತ್ರೆ ಸಂಬಂಧಿಸಿದ ಅನೇಕ ವಚನಗಳು, ಕಾವ್ಯ ಶಾಸನ, ಐತ್ಯಿಯಗಳಲ್ಲಿ ದೊರಕಿವೆ ಎಂದು ತಿಳಿಸಿದರು

ಈ ಸಂದರ್ಭದಲ್ಲಿ ತಾ.ಪಂ ಮಾಜಿ ಅಧ್ಯಕ್ಷ ಶಿವಣ್ಣ ನಾಯಕ ವೆಂಕಟಪೂರ, ಎಸ್‌ಡಿಎಂಸಿ ಅಧ್ಯಕ್ಷ ದುರಗಪ್ಪ, ಗೋವಿಂದಪ್ಪ ನಾಯಕ, ಶಂಭುಲಿಂಗಪ್ಪ ಭೋವಿ, ಗ್ರಾ.ಪಂ ಸದಸ್ಯ ಶಿವರಾಜ, ಹನುಮಂತಪ್ಪ ವಕೀಲರು ಎಲೆಕೂಡ್ಲಿಗಿ, ಈಶ್ವರಪ್ಪ, ಮಂಜುನಾಥ ಗುಂಜಳ್ಳಿ, ಬಸವರಾಜ ರಂಗಾಪೂರ, ಶಿವಪುತ್ರ, ನಾಗಲಿಂಗ ಭೋವಿ, ನಾಗರಾಜ ಭೋವಿ, ಅಖಿಲೇಶ, ದುರುಗೇಶ ಭೋವಿ, ಬಸವರಾಜ ಬಾದರ್ಲಿ, ಶಿಕ್ಷಕರಾದ ಸುಮಂಗಲಾ ಕುಂಬಳಾವತಿ, ಯಲ್ಲಮ್ಮ, ಸತ್ಯಮಣಿ, ಪವಿತ್ರ ಸೇರಿದಂತೆ ವಿದ್ಯಾರ್ಥಿಗಳಿದ್ದರು.

# ಶರಣರು ಹಾಕಿಕೊಟ್ಟ ದಾರಿಯಲ್ಲಿ ನಡೆಯಿರಿ



**ಕೊಟ್ಟೂರು, ಜ.16–** ಶರಣರು ಹಾಕಿಕೊಟ್ಟ ದಾರಿಯಲ್ಲಿ ನಾವೆಲ್ಲರೂ ನಡೆಯಬೇಕಿದೆ ಎಂದು ತಹಶೀಲ್ದಾರ್ ಅಮರೇಶ ಜಾಲಹಳ್ಳಿ ತಿಳಿಸಿದರು.

ಪಟ್ಟಣದ ತಾಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಶ್ರೀ ಸಿದ್ಧರಾಮೇಶ್ವರ ಜಯಂತಿ ಪ್ರಯುಕ್ತ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ಸಿದ್ಧರಾಮೇಶ್ವರರು ಮಹಾನ್ ವಚನಕಾರ, ತತ್ವಜ್ಞಾನಿ, ಸಾಮಾಜಿಕ ಸುಧಾರಕ, ಕರ್ಮಯೋಗಿ, ಕೆರೆ, ಕಟ್ಟೆ, ದೇವಸ್ಥಾನಗಳನ್ನು ನಿರ್ಮಿಸುವುದರ ಮೂಲಕ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸಿದ್ದರು. ಅನುಭವ ಮಂಟಪದ 3ನೇ ಅಧ್ಯಕ್ಷರಾಗಿದ್ದ, ಸಾವಿರಾರು ವಚನಗಳನ್ನು ರಚಿಸುವ ಮೂಲಕ ಸಾಮಾಜಿಕ ಸಮಾನತೆ, ಮೂಢನಂಬಿಕೆ, ಅನಿಷ್ಟಗಳನ್ನು ತೊಲಗಿಸಲು ಪ್ರಯತ್ನಿಸಿ ಕರ್ತವ್ಯವೇ ದೇವರೆಂದು ನಂಬಿದ್ದ ಸಮತೆಯ ಗಾರುಡಿಗರು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮುಖಂಡ ದೊಡ್ಡರಾಮಣ್ಣ, ಅಧ್ಯಕ್ಷ ಹುಲುಗಪ್ಪ, ಮುಖಂಡರಾದ ವಿ ಟಿ ಎಸ್ ತಿಪ್ಪೇಸ್ವಾಮಿ ವೆಂಕಟೇಶ್, ಪಿ ಹೆಚ್ ಪಂಪಣ್ಣ, ಸಣ್ಣ ರಾಮಪ್ಪ, ಪಿ. ಎಚ್. ಕೊಟ್ರೇಶ, ಪಿಡಬ್ಲುಡಿ ಇಂಜಿನಿಯರ್ ಕೊಟ್ರೇಶ್ ಹಾಗೂ ಇತರೆ ಭೋವಿ ಸಮಾಜದ ಮುಖಂಡರು ಭಾಗವಹಿಸಿದ್ದರು.ಗಣೇಶನ ದೇವಸ್ಥಾನದಿಂದ ಪಟ್ಟಣದಲ್ಲಿ ಅದ್ದೂರಿಯಾಗಿ ಶ್ರೀ ಸಿದ್ದರಾಮೇಶ್ವರ ಭಾವಚಿತ್ರದ ಮೆರವಣಿಗೆ ನೆರವೇರಿತು.

# ರಂಗಾಪೂರ ಶಾಲೆಯ ನೂತನ ಎಸ್‌ಡಿಎಂಸಿ ರಚನೆ

ಯುವಮಾರ್ಗ ಸುದ್ದಿ



**ಮಸ್ಕಿ,ಜ.16–**ತಾಲೂಕಿನ ರಂಗಾಪೂರು ಗ್ರಾಮದಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಎಸ್‌ಡಿಎಂಸಿಯನ್ನು ರಚಿಸಲಾಗಿದೆ ಎಂದು ಶಾಲೆಯ ಮುಖ್ಯ ಶಿಕ್ಷಕ ಗಂಗನಗೌಡ ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿಯಾದ ಬಸವಲಿಂಗಪ್ಪ ನೂತನ ಎಸ್‌ಡಿಎಂಸಿ ಅಧ್ಯಕ್ಷರನ್ನಾಗಿ ತಿಮ್ಮಣ್ಣ ನಾಯಕ, ಉಪಾಧ್ಯಕ್ಷರನ್ನಾಗಿ ಗೀತಾ ಶರಣಪ್ಪ ಅವರನ್ನು ಆಯ್ಕೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಗೋವಿಂದಪ್ಪ ನಾಯಕ, ರಾಮಣ್ಣ, ಬಸವರಾಜ, ತಿಮ್ಮಯ್ಯ, ಕುಭೇರಪ್ಪ ಸೇರಿದಂತೆ ಶಾಲೆಯ ಸಹ ಶಿಕ್ಷಕರಿದ್ದರು.

ಮಸ್ಕಿ ತಾಲೂಕಿನ ರಂಗಾಪೂರು ಗ್ರಾಮದ ಸರ್ಕಾರಿ ಶಾಲೆಯ ನೂತನ ಎಸ್‌ಡಿಎಂಸಿ ರಚಿಸಲಾಗಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H